ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೦೮**

**ಒಟ್ಟು ಪ್ರಶ್ನೆಗಳು – ೬೭**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೦೨ನೇ ಜುಲೈ, ೨೦೧೪**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

## ಬೆಂಗಳೂರು ನಗರ ವ್ಯಾಪ್ತಿಯ ಜಲ, ಶಬ್ಧ, ಮಾಲಿನ್ಯ ಕುರಿತು

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):-**

೩೫೯ (೪೭೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿ ಪ್ರದೇಶದಲ್ಲಿ ವಾಯು, ಜಲ, ಶಬ್ಧ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಅಂಶಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೆ ; ಯಾವ ವ್ಯಾಪ್ತಿಯಲ್ಲಿ ಈ ಅಂಶಗಳನ್ನು ಗುರುತಿಸಲಾಗಿದೆ (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಆ) ವಾಯು ಮಾಲಿನ್ಯ ಕಾರಣಗಳಿಂದಾಗಿ ನಗರ ಪ್ರದೇಶದ ಜನರು ಅಸ್ತಮಾ ಅಲರ್ಜಿಯಂತಹ ಕಾಯಿಲೆಗಳಿಗೆ ತುತ್ತಾಗುತ್ತಿರುವ ಪ್ರಮಾಣದ ಅಂದಾಜು ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ, ಈ ಕುರಿತು ಅಂಕಿ-ಅಂಶಗಳ ಮಾಹಿತಿ ಒದಗಿಸುವುದು ;

(ಇ) ನಗರದ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಯಾವ ದೀರ್ಘಾವಧಿ ಯೋಜನೆಗಳನ್ನು ಸರ್ಕಾರವು ರೂಪಿಸುತ್ತಿದೆ (ಪೂರ್ಣರೂಪದ ಮಾಹಿತಿಯನ್ನು ಒದಗಿಸುವುದು) ?

## ಶ್ರೀಗಂಧ ಮರಗಳ ರಕ್ಷಣೆ ಕುರಿತು

**ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):-**

೩೬೦ (೪೭೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ ಭಾಗಗಳಲ್ಲಿ ಶ್ರೀಗಂಧ ಮರಗಳನ್ನು ಬೆಳೆಸಲಾಗಿದೆ ; ಶ್ರೀಗಂಧ ಮರಗಳ ಅಂದಾಜು ಸರ್ಕಾರಕ್ಕೆ ಇದೆಯೆ ;

(ಆ) ಅಕ್ರಮವಾಗಿ ಶ್ರೀಗಂಧ ಮರಗಳನ್ನು ಕಡಿದಿರುವ ಎಷ್ಟು ಪ್ರಕರಣಗಳು ದಾಖಲಾಗಿವೆ ; ಈ ಕೃತ್ಯದಲ್ಲಿ ಭಾಗಿಯಾದವರು ಯಾರು ಅವರ ವಿರುದ್ಧ ಕೈಗೊಂಡ ಕ್ರಮಗಳು ಏನು ; ಮಾಹಿತಿ ಒದಗಿಸುವುದು ;

(ಇ) ಶ್ರೀಗಂಧದ ಮರಗಳ ಬೆಲೆ ನಿಗಧಿಪಡಿಸುವಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾರ್ಗಸೂಚಿ ಮತ್ತು ನಿಯಮಾವಳಿಗಳು ಏನು ; (ಮಾಹಿತಿ ಒದಗಿಸುವುದು)

(ಈ) ಗಂಧದಮರ ಮೌಲ್ಯಮಾಪನ ಮಾಡಲು ಇರುವ ಅಧಿಕಾರಿ ಯಾರು ಮತ್ತು ಅವರ ಅರ್ಹತೆ ಏನು ?

## ಎಚ್.ಡಿ. ಕೋಟೆ ತಾಲ್ಲೂಕು ಕಬಿನಿ ಜಲಾಶಯದಲ್ಲಿ ಉದ್ಯಾನವನ ನಿರ್ಮಿಸುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೬೧ (೪೭೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಕಬಿನಿ ಕಟ್ಟೆ ಪ್ರದೇಶದಲ್ಲಿ ಉದ್ಯಾನವನ ಅಭಿವೃದ್ಧಿಪಡಿಸಲು ಇಲಾಖೆಯಿಂದ ಜಾಗವನ್ನು ಕಾಯ್ದಿರಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಕಾಯ್ದಿರಿಸಿದ ಜಾಗವನ್ನು ವ್ಯವಸ್ಥಿತವಾಗಿ ಉದ್ಯಾನವನ ವನ್ನಾಗಿ ಅಭಿವೃದ್ಧಿಪಡಿಸದಿರಲು ಕಾರಣಗಳೇನು ;

(ಇ) ಸದರಿ ಭೂ ಪ್ರದೇಶವನ್ನು ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು ?

## ರಾಜ್ಯದಲ್ಲಿರುವ ಅಚ್ಚುಕಟ್ಟು ಪ್ರದೇಶದ ಮಾಹಿತಿ ನೀಡುವ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೬೨ (೪೭೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನೀರಾವರಿ ಅಚ್ಚುಕಟ್ಟು ಪ್ರದೇಶವೆಂದು ನೀರಾವರಿ ಇಲಾಖೆಯಿಂದ ಪರಿಗಣಿಸಲ್ಪಟ್ಟ ಒಟ್ಟು ಭೂ ಪ್ರದೇಶ ಎಷ್ಟು ;

(ಆ) ಈ ರೀತಿ ಇಲಾಖೆಯಿಂದ ಅಚ್ಚುಕಟ್ಟು ಪ್ರದೇಶವೆಂದು ಪರಿಗಣಿಸಲ್ಪಟ್ಟ ಭೂಮಿಯನ್ನು ಕಳೆದ ೧೦ ವರ್ಷಗಳಲ್ಲಿ ಕೃಷಿಯೇತರ ಯಾವ್ಯಾವ ಉದ್ದೇಶಗಳಿಗಾಗಿ ಭೂ ಸ್ವಾಧೀನಗೊಳಿಸಲಾಗಿದೆ, ಹಾಗೂ ಅದರ ಪ್ರಮಾಣವೇನು ;

(ಇ) ಕೃಷಿಯೇತರ ಉದ್ದೇಶಗಳಿಗಾಗಿ ನೀರಾವರಿ ಭೂಮಿಯನ್ನು (ಅಚ್ಚುಕಟ್ಟು ಪ್ರದೇಶ) ಭೂ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಇಲಾಖಾ ಒಪ್ಪಿಗೆಯನ್ನು ಕೇಳುವ ಪದ್ಧತಿ ಜಾರಿಯಲ್ಲಿದೆಯೆ ;

(ಈ) ಇಲಾಖಾ ಒಪ್ಪಿಗೆ ಪಡೆಯದೆ ಕೃಷಿಯೇತರ ಕಾರ್ಯಗಳಿಗಾಗಿ ನೀರಾವರಿ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿದಲ್ಲಿ ಇಲಾಖೆಯ ಸದರಿ ಭೂಮಿಯನ್ನು ಅಚ್ಚುಕಟ್ಟು ಪ್ರದೇಶವಾಗಿ ಉಳಿಸಿಕೊಳ್ಳಲು ಅನುಸರಿಸುತ್ತಿರುವ, ಹಾಲಿ ಜಾರಿಯಲ್ಲಿರುವ ನಿಯಮಗಳೇನು ?

## ನೀರಾವರಿ ಇಲಾಖೆ ನಾಲಾ ಹಾಗೂ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಹಸಿರೀಕರಣಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೬೩ (೪೮೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೀರಾವರಿ ಇಲಾಖೆ ರಾಜ್ಯವ್ಯಾಪ್ತಿ ಹೊಂದಿರುವ ನಾಲಾ ಹಾಗೂ ಅಚ್ಚುಕಟ್ಟು ಪ್ರದೇಶದ (ಕಿ.ಮೀ.ಗಳಲ್ಲಿ) ವ್ಯಾಪ್ತಿಯೆಷ್ಟು ;

(ಆ) ನಾಲಾ ಹಾಗೂ ಅಚ್ಚುಕಟ್ಟು ಪ್ರದೇಶಗಳಲ್ಲಿ ಈವರೆಗೆ ಹಸಿರೀಕರಣಕ್ಕಾಗಿ (ಕಳೆದ ೧೦ ವರ್ಷಗಳಲ್ಲಿ) ಇಲಾಖೆಯಿಂದ ವ್ಯಯಿಸಿದ (ವೆಚ್ಚ ಮಾಡಲ್ಪಟ್ಟ) ಒಟ್ಟು ಮೊತ್ತವೆಷ್ಟು ;

(ಇ) ಅಚ್ಚುಕಟ್ಟು ವ್ಯಾಪ್ತಿಯಲ್ಲಿ ವ್ಯವಸ್ಥಿತವಾಗಿ ಹಸಿರೀಕರಣಕ್ಕೆ ಆದ್ಯತೆ ನೀಡಲು ಇಲಾಖೆಯು ಅಳವಡಿಸಿಕೊಂಡ ನಿಯಮಗಳೇನು ; ಹಾಗೂ ಸದರಿ ನಿಯಮಗಳು ಜಾರಿಗೊಳ್ಳುತ್ತಿರುವ ಬಗ್ಗೆ ಕಾಲಕಾಲಕ್ಕೆ ಗಮನ ಹರಿಸುವ ಪದ್ಧತಿ ಜಾರಿಯಲ್ಲಿದೆಯೇ ?

## ಕಲ್ಯಾಣ ಮಂಟಪಗಳಲ್ಲಿನ ಹೆಚ್ಚಿನ ಆಹಾರದಿಂದ ಪರಿಸರ ಮಾಲಿನ್ಯ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೩೬೪ (೪೮೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲ್ಯಾಣ ಮಂಟಪಗಳಲ್ಲಿ ಹೆಚ್ಚಿನ ಆಹಾರ ಹಾಳಾಗುತ್ತಿದ್ದು, ಪರಿಸರ ಮಾಲಿನ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹೆಚ್ಚುವರಿ ಆಹಾರದಿಂದ ಉಂಟಾಗುವ ಪರಿಸರ ಮಾಲಿನ್ಯ ತಡೆಗಟ್ಟಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮುಗಳೇನು ;

(ಇ) ಹೆಚ್ಚಿನ ಆಹಾರ ಮಾಲಿನ್ಯ ಉಂಟು ಮಾಡುವ ಕಲ್ಯಾಣ ಮಂಟಪಗಳಿಂದ ದಂಡ ವಸೂಲಿ ಮಾಡಲಾಗುವುದೇ ;

(ಈ) ಹೆಚ್ಚಿನ ತಿಂಡಿ, ಆಹಾರ ಪದಾರ್ಥಗಳನ್ನು ಅನಾಥಾಲಯ, ಭಿಕ್ಷುಕರ ವಸತಿ ಕೇಂದ್ರ ಮುಂತಾದುವುಗಳಿಗೆ ಸರಬರಾಜು ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು ?

## "ಸಕಾಲ" ಅಡಿಯಲ್ಲಿ ತಂದಿರುವ ಕಾರ್ಯಕ್ರಮಗಳ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೬೫ (೪೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಸರ್ಕಾರಿ ಕಾರ್ಯಕ್ರಮದ "ಸಕಾಲ" ಅಡಿಯಲ್ಲಿ ತಂದಿರುವ ಕಾರ್ಯಕ್ರಮಗಳಾವುವು ;

(ಆ) "ಸಕಾಲ" ಅಡಿಯಲ್ಲಿ ತಂದಿರುವ ಕಾರ್ಯಕ್ರಮಗಳು ಯಾವುವು ; ಇವುಗಳನ್ನು ಸಕಾಲದ ಅಡಿಯಲ್ಲಿ ತರದಿರಲು ಕಾರಣಗಳೇನು ;

(ಇ) ರೈತರಿಂದ ಜಮೀನಿಗೆ ಖಾತೆ ಮಾಡುವುದು, ಸರ್ವೆ ಮಾಡುವುದು, ಪೋಡಿ ಮಾಡಲು ಕಳೆದ ೫ ವರ್ಷಗಳಲ್ಲಿ ಬಂದಿರುವ ಅರ್ಜಿಗಳೆಷ್ಟು ;

(ಈ) ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ, ಬಾಕಿಯಿರುವ ಅರ್ಜಿಗಳೆಷ್ಟು ಮತ್ತು ಈ ಕಾರ್ಯಕ್ರಮಗಳಿಗೆ "ಸಕಾಲ" ಅಳವಡಿಸಲು ಸರ್ಕಾರಕ್ಕೆ ಇರುವ ಕಾನೂನು ತೊಡಕುಗಳೇನು ?

## ಬಗರ್ ಹುಕುಂ ಜಮೀನಿನ ಮಂಜೂರಾತಿ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೬೬ (೫೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಗರ್ ಹುಕುಂ, ಅತಿಕ್ರಮಣ ಜಮೀನು ಮಂಜೂರಾತಿ ಕುರಿತು ಎಷ್ಟು ಅರ್ಜಿಗಳು ಬಂದಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಈ ವಿಷಯ ಕುರಿತು ಸರ್ಕಾರದ ಮುಂದಿನ ಕ್ರಮವೇನು ; ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ ; ಎಷ್ಟು ಬಾಕಿ ಇವೆ ;

(ಇ) ಇನ್ನು ಎಷ್ಟು ಸಮಯದಲ್ಲಿ ಈ ಸಮಸ್ಯೆಗೆ ಪರಿಹಾರ ಸರ್ಕಾರ ನೀಡುವುದು ?

## ಇನಾಂ ಭೂಮಿ ಸಮಸ್ಯೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೭ (೪೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳಸ ಇನಾಂ ಭೂಮಿ ಸಮಸ್ಯೆ ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ; ಭೀತಿಯಲ್ಲಿರುವ ಇನಾಂ ಭೂಮಿ ಕೃಷಿಕರು ಮತ್ತು ಮನೆ ಕಟ್ಟಿಕೊಂಡು ಬದುಕುತ್ತಿರುವ ಕುಟುಂಬಗಳಿಗೆ ಸರ್ಕಾರ ಯಾವ ರೀತಿಯಲ್ಲಿ ಭದ್ರತೆ ಕಲ್ಪಿಸಲು ಪರ್ಯಾಯ ವ್ಯವಸ್ಥೆ ಮಾಡುವುದು ;

(ಆ) ಮಲೆನಾಡು ಭಾಗದಲ್ಲಿ ಇದೀಗ ರೈತರು ಮತ್ತು ಬೆಳೆಗಾರರನ್ನು ನಿದ್ದೆಗೆಡಿಸಿರುವ, ಒತ್ತುವರಿ ಸಮಸ್ಯೆಗೆ ಯಾವ ಪರಿಹಾರವನ್ನು

ಸರ್ಕಾರ ಕಂಡುಕೊಂಡಿದೆ ; ಅರಣ್ಯ ಮತ್ತು ಕಂದಾಯ ಭೂಮಿ ಜಂಟಿ ಸರ್ವೆ ನಡೆಸಲು ಹಾಗೂ ಕಂದಾಯ ಮತ್ತು ಅರಣ್ಯ ಭೂಮಿ ವಿಂಗಡಿಸಿ ಗುರುತಿಸದೇ ಒತ್ತುವರಿ ತೆರವು ಮಾಡಲಾಗುತ್ತಿದೆಯೇ ;

(ಇ) ಮುಖ್ಯಮಂತ್ರಿಗಳು ೧೦ ಎಕರೆಗಿಂತ ಕಡಿಮೆ ಭೂಮಿ ತೆರವುಗೊಳಿಸದಂತೆ ಸೂಚನೆ ನೀಡಿದರೂ ಕಳಸ ಭಾಗದ ಇನಾಂ ಸಂತ್ರಸ್ಥರಾದ ಕಳಸ ಹೋಬಳಿ ಮಾವಿನಕೆರೆ ಗ್ರಾಮದ ಹಳುವಳ್ಳಿ ಎಂಬಲ್ಲಿನ ಸ.ನಂ. ೮೨೬ರಲ್ಲಿ ವೆಂಕಟೇಶಯ್ಯ ಹಿಡುವಳಿ ಮಾಡಿಕೊಂಡಿದ್ದ ೭.೧೮ ಎಕರೆ ಭೂಮಿ ಮತ್ತು ಅದೇ ಗ್ರಾಮದ ಸ.ನಂ.೮೨೬ರಲ್ಲಿ ಶೈಲೇಶ್ ಎಂಬುವರ ೮.೩೦ ಎಕರೆ ಭೂಮಿಯನ್ನು ಅರಣ್ಯ ಇಲಾಖೆ ತೆರವುಗೊಳಿಸಿರುವುದು ಹೇಗೆ ?

## ಅಕಾಲಿಕ ಆಲಿಕಲ್ಲು ಮಳೆಯಿಂದ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ಕೃಷಿ ಹಾನಿ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೩೬೮ (೪೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆಯಿಂದ ಆಗಿರುವ ಕೃಷಿ ಬೆಳೆ ಹಾನಿ ಎಷ್ಟು ;

(ಆ) ಸರ್ಕಾರದಿಂದ ಹಾನಿ ಪರಿಹಾರ ನೀಡಲಾಗಿದೆಯೇ ;

(ಇ) ಎಷ್ಟು ಪರಿಹಾರ ನೀಡಲಾಗಿದೆ ; ನೀಡದಿದ್ದರೆ, ಯಾವಾಗ ನೀಡಲಾಗುವುದು ?

## ಅಕಾಲಿಕ ಮಳೆಯಿಂದಾಗಿ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ತೋಟಗಾರಿಕಾ ಹಾನಿ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :–**

೩೬೯ (೪೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆಯಿಂದ ಆಗಿರುವ ತೋಟಗಾರಿಕಾ ಬೆಳೆ ಹಾನಿ ಎಷ್ಟು ;

(ಆ) ಸರ್ಕಾರದಿಂದ ಹಾನಿ ಪರಿಹಾರ ನೀಡಲಾಗಿದೆಯೇ ;

(ಇ) ಎಷ್ಟು ಪರಿಹಾರ ನೀಡಲಾಗುವುದು ನೀಡದಿದ್ದರೆ, ಯಾವಾಗ ನೀಡಲಾಗುವುದು ?

## ಸಿಂದಗಿಯ ತಹಸೀಲ್ದಾರ್ ಕಛೇರಿ ಹಾಗೂ ಮಿನಿ ವಿಧಾನಸೌಧ ನಿರ್ಮಾಣದ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :–**

೩೭೦ (೪೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂದಗಿಯಲ್ಲಿ ಮಿನಿ ವಿಧಾನಸೌಧ ಕಟ್ಟಡದ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ತಾಲ್ಲೂಕು ಪಂಚಾಯ್ತಿಗಳು ಸೇರಿದಂತೆ ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ಮಿನಿ ವಿಧಾನ ಸೌಧ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಆ) ಸಿಂದಗಿಯ ಹೃದಯ ಭಾಗದಲ್ಲಿರುವ ಹಳೆಯ ತಹಸೀಲ್ದಾರ್ ಕಛೇರಿ, ಸರ್ಕಲ್ ಕಛೇರಿ ಹಳೆಯ ಪೊಲೀಸ್ ಕ್ವಾರ್ಟಸ್,

ಹಳೆಯ ಪರೇಡ್ ಮೈದಾನ, ಹಳೆಯ ಬಿ.ಇ.ಓ ಕಛೇರಿ ಇವು ಈಗ ಯಾರ ಒಡೆತನದಲ್ಲಿ ಹಾಗೂ ಅಧೀನದಲ್ಲಿದೆ ;

(ಇ) ಇವುಗಳ ಒಟ್ಟು ವಿಸ್ತೀರ್ಣ ಎಷ್ಟು ವಿವರ ನೀಡುವುದು ?

## ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಕಛೇರಿಯನ್ನು ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ವರ್ಗಾವಣೆ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):--**

೩೭೧ (೪೯೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರ ಕಛೇರಿ ವ್ಯಾಪ್ತಿಗೆ ಯಾವ ಯಾವ ಜಿಲ್ಲೆಯ ಕೆಲಸಗಳು ಬರುತ್ತವೆ ;

(ಆ) ಆಡಳಿತಾತ್ಮಕ ಮಂಜೂರಾತಿ ಹಾಗೂ ದಿನ ನಿತ್ಯದ ಕೆಲಸಗಳ ಮಂಜೂರಾತಿ ಪಡೆಯುವ ಸಲುವಾಗಿ ಈ ಭಾಗದ ಅಧಿಕಾರಿಗಳು ಬೆಂಗಳೂರಿಗೆ ಹೋಗಿ ಬರುವಲ್ಲಿ ಸಮಯ ಹಾಗೂ ಹಣ ವ್ಯಯವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮುಖ್ಯ ಇಂಜನೀಯರ್ ಕಳುಹಿಸಿದ ಪ್ರಸ್ತಾವನೆಗಳಿಗೆ ಮಂಜೂರಾತಿ ಕೊಡುವಲ್ಲಿ ವರ್ಷಾನುಗಟ್ಟಲೆ ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮುಖ್ಯ ಇಂಜಿನಿಯರ್ ಇವರಿಂದ ಬಂದ ಪ್ರಸ್ತಾವನೆಗಳಿಗೆ ವರ್ಷಾನುಗಟ್ಟಲೆ ನಿರ್ಣಯ ತೆಗೆದುಕೊಳ್ಳದೇ ಇರುವ ಪ್ರಸ್ತಾವನೆಗಳು ಎಷ್ಟು ;

(ಉ) ತ್ವರಿತಗತಿಯಲ್ಲಿ ಮಂಜೂರಾತಿ ನೀಡುವಲ್ಲಿ ಹಾಗೂ ಆಡಳಿತಾತ್ಮಕ ಹಿತದ ದೃಷ್ಟಿಯಿಂದ ಬೆಂಗಳೂರಿನಲ್ಲಿ ಇರುವ ವ್ಯವಸ್ಥಾಪಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಕಛೇರಿಯನ್ನು ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ ?

**ಚಚಡಿ–ಮುರಗೋಡ ಏತ ನೀರಾವರಿ ಕೆಲಸ ಪ್ರಾರಂಭಿಸುವ ಬಗ್ಗೆ**

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಬೈಲಹೊಂಗಲ) (ಪದವೀಧರರ ಕ್ಷೇತ್ರ):-**

೩೭೨ (೪೯೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಚಡಿ–ಮುರಗೋಡ ಹಾಗೂ ಸುತ್ತಮುತ್ತಲಿನ ಹಳ್ಳಿಗಳು ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವ ಸಂಗತಿ ನಿಜವೇ ;

(ಆ) ಈ ಜನರ ಅನುಕೂಲತೆಗಾಗಿ ಸರ್ಕಾರದವರು ಚಚಡಿ–ಮುರಗೋಡ ಏತ ನೀರಾವತಿ ಯೋಜನೆ ಕೈಗೊಳ್ಳಲು ನಿರ್ಣಯಿಸಲಾದ ಸಂಗತಿ ನಿಜವೇ ;

(ಇ) ಈ ಯೋಜನೆ ಕೈಗೊಳ್ಳುವುದರಿಂದ ಈ ಭಾಗದಲ್ಲಿ ಶಾಶ್ವತ ನೀರಾವರಿ ಯೋಜನೆ ಆಗುವುದರಿಂದ ಕೂಡಲೇ ಕೆಲಸ ಪ್ರಾರಂಭಿಸಲಾಗುವುದೇ ;

(ಈ) ಈಗ ಯೋಜನೆ ಯಾವ ಹಂತದಲ್ಲಿ ಇರುವುದು (ವಿವರ ನೀಡುವುದು) ?

# ಬೈಲಹೊಂಗಲ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳ ಕೆರೆಗೆ ನೀರು ಒದಗಿಸುವ ಯೋಜನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೩೭೩ (೪೯೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕಿನ ಜಮೀನುಗಳಿಗೆ ನದಿಯಿಂದ-ಕೆರೆಗೆ, ಕೆರೆಯಿಂದ-ಕೆರೆಗೆ ನೀರು ಒದಗಿಸುವ ಯೋಜನೆಯನ್ನು ಕೈಗೊಳ್ಳಲು ಸಾರ್ವಜನಿಕರು ಸರ್ಕಾರಕ್ಕೆ ವಿನಂತಿಸಿಕೊಂಡಿರುವರೇ ;

(ಆ) ಹಾಗಿದ್ದಲ್ಲಿ ಈ ತಾಲ್ಲೂಕಿನ ಯಾವ-ಯಾವ ಗ್ರಾಮದ ಜಮೀನುಗಳಿಗೆ ನೀರನ್ನು ಒದಗಿಸಬೇಕು ಎಂದು ಕೋರಿರುತ್ತಾರೆ ;

(ಇ) ಈ ಮೂರು ತಾಲ್ಲೂಕುಗಳಲ್ಲಿ ಅಂತರಜಲ ಕಡಿಮೆ ಇದ್ದು ಬೋರ್‌ಬೆಲ್ ತೋಡಿಸಬಾರದು ಎಂದು ಸರ್ಕಾರ ಆದೇಶ ಮಾಡಿದ್ದು, ಅಂತರಜಲ ಹೆಚ್ಚಿಸುವ ಸಲುವಾಗಿ ಈ ಯೋಜನೆ ಕೈಗೊಳ್ಳುವುದು ಅವಶ್ಯವಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬೈಲಹೊಂಗಲ ತಾಲ್ಲೂಕಿನ ದೇಶನೂರು ಕೆರೆಗೆ ಕೇಂದ್ರ ಸರ್ಕಾರದ ಸಹಾಯದಿಂದ ನೀರು ಒದಗಿಸುವುದರಿಂದ ಕೆ.ಎಲ್.ಇ. ಸಂಸ್ಥೆ, ಬೆಳಗಾವಿ ಇವರು ಸ್ಥಾಪಿಸಿದ ಕೃಷಿ ವಿಜ್ಞಾನ ಕೇಂದ್ರದ ಜಮೀನುಗಳಿಗೂ ಸಹ ನೀರಾವರಿ ಒದಗಿಸಲು ಸಾಧ್ಯ ವಾಗುತ್ತಿರುವುದರಿಂದ ಈ ಯೋಜನೆಯನ್ನು ಕೂಡಲೇ ಕೈಗೊಳ್ಳಲಾಗುವುದೇ ?

## ಹಿಡಕಲ್ ಅಣೆಕಟ್ಟು ಕೆಳಗೆ ಬೃಂದಾವನ ಮಾದರಿಯಲ್ಲಿ ಗಾರ್ಡನ್ ಮತ್ತು ಪ್ರವಾಸಿ ಮಂದಿರ ಕಟ್ಟುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):-**

೩೭೪ (೪೯೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಿನಾಂಕ:೧೪-೦೭-೧೯೮೭ರಂದು ಜರುಗಿದ ಸಭೆಯಲ್ಲಿ ಸರ್ಕಾರ ಹಿಡಕಲ್ ಅಣೆಕಟ್ಟು ಕೆಳಭಾಗದಲ್ಲಿ ಬೃಂದಾವನ ಮಾದರಿಯ ಉದ್ಯಾನವನವನ್ನು ನಿರ್ಮಿಸಲು ನಿರ್ಣಯಿಸಿದ ಸಂಗತಿ ನಿಜವೇ ;

(ಆ) ಈ ಯೋಜನೆಯ ನೀಲಿ ನಕ್ಷೆ ಯಾರಿಂದ ಮತ್ತು ಎಂದು ತಯಾರಿಸಲಾಯಿತು ; ಈ ಕೆಲಸಕ್ಕೆ ಎಷ್ಟು ವೆಚ್ಚ ತಗಲುವುದು ಸಂಪೂರ್ಣ ವಿವರ ಒದಗಿಸುವುದು ;

(ಇ) ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ಬೆಂಗಳೂರು ಇವರು ಆರ್ಕಿಟೆಕ್ಟರವರಿಂದ ಯಾವತ್ತು ಟೆಂಡರ್ ಕರೆದಿರುವರು (ವಿವರ ಒದಗಿಸುವುದು) ;

(ಈ) ಕಾವೇರಿ ನೀರಾವರಿ ನಿಗಮದ ಅಣೆಕಟ್ಟುಗಳ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಿದಂತೆ ಇಲ್ಲಿಯೂ ಅಭಿವೃದ್ಧಿ ಪಡಿಸಲಾಗುವುದೇ ;

(ಉ) ಈಗಾಗಲೇ ಸರ್ಕಾರದಿಂದ ಈ ಕೆಲಸಕ್ಕೆ ೫.೫೦ ಕೋಟಿ ರೂಪಾಯಿ ಹಣ ಬಿಡುಗಡೆ ಆದ ಸಂಗತಿ ನಿಜವೇ ; ಅನುದಾನ ಬಿಡುಗಡೆ ಆದರೂ ಇದೂವರೆಗೂ ಕೆಲಸ ಪ್ರಾರಂಭವಾಗದಿರಲು ಕಾರಣವೇನು ; ಎಷ್ಟು ದಿನಗಳಲ್ಲಿ ಕೆಲಸ ಪ್ರಾರಂಭಿಸಲಾಗುವುದು ;

(ಊ) ವ್ಯವಸ್ಥಾಪಕ ನಿರ್ದೇಶಕರು ೨೦೧೩ರಲ್ಲಿ ತಾಂತ್ರಿಕ ಉಪ ಸಮಿತಿಯವರು, ಈ ಕೆಲಸಕ್ಕೆ ಅನುಮೋದನೆ ನೀಡಿ, ಮುಖ್ಯ ಇಂಜನೀಯರ್ ನೀರಾವರಿ ಉತ್ತರ ವಲಯ ಬೆಳಗಾವಿ ಇವರಿಗೆ ಈ ಕೆಲಸಕ್ಕೆ ೫ ಕೋಟಿ ಅನುದಾನ ಅನುಮೋದನೆ ನೀಡಿ ; ಮಂಜೂರಾತಿ ನೀಡಿದ ಸಂಗತಿ ನಿಜವೇ ; ಹಾಗಿದ್ದಲ್ಲಿ ಕೂಡಲೇ ಈ ಕೆಲಸವನ್ನು ಪ್ರಾರಂಭಿಸಲಾಗುವುದೇ ?

## ಬಗರ್ ಹುಕುಮ್ ಸಾಗುವಳಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೭೫ (೪೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಗರ್ ಹುಕುಮ್ ಸಾಗುವಳಿಯನ್ನು ಸಕ್ರಮಗೊಳಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಈ ಅರ್ಜಿಗಳಲ್ಲಿ ಸಕ್ರಮೀಕರಣಕ್ಕೆ ಕೋರಿರುವ ಬಗರ್ ಹುಕುಮ್ ಸಾಗುವಳಿಯ ಜಮೀನಿನ ವಿಸ್ತೀರ್ಣ ಎಷ್ಟು ;

(ಆ) ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ ; ಎಷ್ಟು ಅರ್ಜಿಗಳು ಪರಿಶೀಲನೆಯಲ್ಲಿವೆ ; ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) ?

## ರೈತರು, ಸಾರ್ವಜನಿಕರ ಭೂ ಸರ್ವೆ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೭೬ (೪೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂ ಮಾಪನ ಇಲಾಖೆಯು ಅಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಸರ್ವೆಯರ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಸಾರ್ವಜನಿಕರಿಂದ ಬಂದ ಅರ್ಜಿಗಳನ್ನು ಸ್ವೀಕರಿಸಿದ ಬಳಿಕ ಸರ್ವೆಯರುಗಳು ಸರ್ವೆ ಕಾರ್ಯವನ್ನು ಪೂರೈಸಲು ತೆಗೆದುಕೊಳ್ಳುವ ಅವಧಿ ಎಷ್ಟು ;

(ಈ) ರಾಜ್ಯದಲ್ಲಿ ಸಾರ್ವಜನಿಕರ ಭೂ ಸರ್ವೆ ಕಾರ್ಯ ಬಾಕಿ ಇರುವ ಪ್ರಕರಣಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಉ) ಸಾರ್ವಜನಿಕರಿಗೆ ನಿಗದಿತ ಅವಧಿಯೊಳಗೆ ಸರ್ವೆ ಕಾರ್ಯ ಪೂರೈಸದೆ ವಿನಾಕಾರಣ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು ;

(ಊ) ರೈತರ, ಸಾರ್ವಜನಿಕರ ಭೂ ಸರ್ವೆ ಕಾರ್ಯ ವಿಳಂಬ ಮಾಡದೇ ಮಾಡಿಕೊಡಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ?

## ನಿರುದ್ಯೋಗ ಸಮಸ್ಯೆ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೭೭ (೪೯೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ನಿರುದ್ಯೋಗಿ ಪದವೀಧರರೆಷ್ಟು (ಪದವಿಗಳನುಸಾರವಾಗಿ ವಿವರ ನೀಡುವುದು) ;

(ಆ) ಇವರಲ್ಲಿ ವಯೋಮಿತಿ ಮೀರಿದವರ ಸಂಖ್ಯೆ ಎಷ್ಟು (ವಿವರ ನೀಡುವುದು) ;

(ಇ) ಪದವಿ, ಡಿಎಡ್, ಬಿ.ಎಡ್, ಇಂಜಿನಿಯರಿಂಗ್, ವೈದ್ಯಕೀಯ ಇತ್ಯಾದಿ ಪದವಿ ಪಡೆದು ಉದ್ಯೋಗವಿಲ್ಲದೆ ಅನಾಥವಾಗಿರುವ ನಿರುದ್ಯೋಗಿಗಳನ್ನು ಸರ್ಕಾರ ಗುರುತಿಸಿದೆಯೇ ;

(ಈ) ಇವರಲ್ಲಿ ವಯೋಮಿತಿ ಮೀರಿದವರ ಸಂಖ್ಯೆ ಎಷ್ಟು ;

(ಉ) ಸರ್ಕಾರ ಕಾನೂನು ಬದ್ಧವಾಗಿ ನಿರುದ್ಯೋಗಿ ಸಮಸ್ಯೆಯನ್ನು ತೊಡೆದು ಹಾಕಲು ಕೈಗೊಂಡ ಕ್ರಮವೇನು ;

(ಊ) ರಾಜ್ಯದಲ್ಲಿ ಯುವಕರ ಒಟ್ಟು ಸಂಖ್ಯೆ ಎಷ್ಟು ; ಯುವ ಶಕ್ತಿಯನ್ನು ರಾಜ್ಯದ ಅಭಿವೃದ್ಧಿಗೆ ಸರ್ಕಾರ ಬಳಸಿಕೊಳ್ಳಲು ಕೈಗೊಂಡ ಕ್ರಮವೇನು ;

(ಋ) ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲನೆ ಮಾಡುವಲ್ಲಿ ಸರ್ಕಾರದ ಮುಂದಿರುವ ಸವಾಲು, ಚಿಂತನೆ, ಹೊಸದಾದ ಮಾರ್ಗಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದು ?

## ಎತ್ತಿನಹೊಳೆ ಯೋಜನೆ ಪರಮಶಿವಯ್ಯ ಯೋಜನೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೭೮ (೪೯೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಮಶಿವಯ್ಯ ವರದಿ ಪ್ರಕಾರ ನೇತ್ರಾವತಿ ನದಿ ತಿರುವು ಯೋಜನೆ ಮೂಲಕ ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ಮತ್ತು ನೀರಾವರಿಗೆ ನೀರು ಒದಗಿಸುವ ಯೋಜನೆ ಸರ್ಕಾರದ ಯಾವ ಹಂತದಲ್ಲಿದೆ (ವಿವರ ನೀಡುವುದು) ;

(ಆ) ನೇತ್ರಾವತಿ ತಿರುವು ಯೋಜನೆ ಅನುಷ್ಠಾನದ ಬಗ್ಗೆ ಕೋಲಾರ ಚಿಕ್ಕಬಳ್ಳಾಪುರದಲ್ಲಿ ನಿರಂತರವಾಗಿ ನಡೆಯುತ್ತಿರುವ ಚಳುವಳಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೈಗೊಂಡ ಕ್ರಮವೇನು ;

(ಇ) ಎತ್ತಿನ ಹೊಳೆ ಯೋಜನೆಯಿಂದ ನೀರಿನ ಅಭಾವದ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಒದಗಿಸಿ, ನೀರಾವರಿ ಭೂಮಿಯನ್ನಾಗಿಸುವಲ್ಲಿ ಸರ್ಕಾರದ ಕ್ರಮವೇನು ;

(ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು) ?

-2-

## ಸರ್ವೆ, ಖಾತೆ ತಿದ್ದುಪಡಿ ಕೆಲಸಗಳಿಗೆ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೭೯ (೪೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ವೆ ಖಾತೆ ಮತ್ತು ತಿದ್ದುಪಡಿ ಮಾಡಲು ಗ್ರಾಮಲೆಕ್ಕಿಗರು, ರೆವನ್ಯೂ ಇನ್ಸ್‌ಪೆಕ್ಟರ್‌ಗಳು ಮತ್ತು ತಹಸೀಲ್ದಾರಗಳು ಎಷ್ಟೆಷ್ಟು ದಿನ ಕಡತ ತಮ್ಮ ಬಳಿ ಇಟ್ಟುಕೊಳ್ಳುವರು, ಒಂದು ದುರಸ್ತಿ ಆಗಬೇಕಾದರೆ ಎಷ್ಟು ದಿನ ಕಾಲಾವಕಾಶ ಬೇಕು ;

(ಆ) ಬೆಂಗಳೂರು ಉತ್ತರ ತಹಸೀಲ್ದಾರ ಕಛೇರಿಯಲ್ಲಿ ರೈತರಿಂದ ಬಂದಿರುವ ಖಾತೆ ತಿದ್ದುಪಡಿ ಸರ್ವೆ ಪೂರ್ತಿ ದುರಸ್ತಿಗೆ ಎಷ್ಟು ಅರ್ಜಿಗಳು ಬಂದಿವೆ, ಅವುಗಳಲ್ಲಿ ಬಾಕಿ ಇರುವ ಅರ್ಜಿಗಳೆಷ್ಟು ; ಇತ್ಯರ್ಥವಾಗದ ಅರ್ಜಿಗಳೆಷ್ಟು ;

(ಇ) ರೈತರ ಜಮೀನುಗಳಿಗೆ ಅತಿಜರೂರಾಗಿ ಖಾತೆ ಮಾಡಲು ಮತ್ತು ಪೋಡಿ ದುರಸ್ತಿ ಮಾಡಲು ಮತ್ತು ಸರ್ವೆ ಮಾಡಲು ಬಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಈ) ಬಂದಿದ್ದರೆ, ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ?

## ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಣ್ಣ ನೀರಾವರಿ ಇಲಾಖಾ ಕಛೇರಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೮೦ (೫೦೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಎಷ್ಟು ಕಛೇರಿಗಳಿವೆ; ಮತ್ತು ಈ ಕಛೇರಿಗಳಲ್ಲಿ ಖಾಸಗಿ ಮತ್ತು ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳು ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ರಾಜ್ಯದಲ್ಲಿ ಖಾಸಗಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಣ್ಣ ನೀರಾವರಿ ಇಲಾಖೆಯ ಕಛೇರಿಗಳಿಗೆ ಮಾಸಿಕ ಬಾಡಿಗೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯ ಮಣಿಪಾಲದಲ್ಲಿರುವ ಜಿಲ್ಲಾಧಿಕಾರಿಗಳ ಸಂಕೀರ್ಣವಾದ 'ರಜತಾದ್ರಿ' ಯಲ್ಲಿ ಸಣ್ಣ ನೀರಾವರಿ ಇಲಾಖೆಯ ಕಛೇರಿಗೆ ಸ್ಥಳಾವಕಾಶವನ್ನು ಕಲ್ಪಿಸಿದ್ದರೂ ಸಹ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಔಚಿತ್ಯವೇನು; ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದೇ ?

**ಉಡುಪಿ ಜಿಲ್ಲೆಯ ಕರಾವಳಿಯಲ್ಲಿ ಆಗುತ್ತಿರುವ ಸಮುದ್ರ ಕೊರೆತ**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೮೧ (೫೦೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯ ಕರಾವಳಿಯ ಯಾವ ಯಾವ ಭಾಗದಲ್ಲಿ ಸಮುದ್ರ ಕೊರೆತ ಪ್ರಾರಂಭವಾಗಿದೆ ಮತ್ತು ಈ ಸಮುದ್ರ ಕೊರೆತವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿಧಾನಸಭಾವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಭಾಗದಲ್ಲಿ ಸಮುದ್ರ ಕೊರೆತವನ್ನು ತಪ್ಪಿಸಲು ಶಾಶ್ವತ ತಡೆಗೋಡೆ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆ; ಮತ್ತು ಈ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ; (ವಿಧಾನಸಭಾವಾರು ವಿವರ ನೀಡುವುದು)

(ಇ) ಕುಂದಾಪುರ ತಾಲ್ಲೂಕಿನ ಶಿರೂರು ಗ್ರಾಮದ ಸ್ವಾಬರತೋಪ್ಲು ಎಂಬಲ್ಲಿ ಸಮುದ್ರ ಕೊರೆತ ಉಗ್ರವಾಗಿದ್ದರೂ ಇನ್ನೂ ತಾತ್ಕಾಲಿಕ ತಡೆಗೋಡೆ ನಿರ್ಮಿಸುವ ಕಾಮಗಾರಿ ಪ್ರಾರಂಭಿಸದಿರಲು ಕಾರಣವೇನು ?

## ವರಾಹಿ ನೀರಾವರಿ ಯೋಜನೆಯಿಂದ ನೀರನ್ನು ಒದಗಿಸಲಾದ ಕೃಷಿ ಭೂಮಿಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೮೨ (೫೦೨) ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ವರಾಹಿ ನೀರಾವರಿ ಯೋಜನೆಯಿಂದ ಯೋಜನಾ ಪ್ರದೇಶದಲ್ಲಿ ನೀರನ್ನು ಒದಗಿಸಲಾದ ಕೃಷಿ ಭೂಮಿಯ ಒಟ್ಟು ವಿಸ್ತೀರ್ಣವೆಷ್ಟು; ಮತ್ತು ಅದರ ಪ್ರಯೋಜನವನ್ನು ಪಡೆದ ರೈತಕುಟುಂಬಗಳ ಸಂಖ್ಯೆ ಎಷ್ಟು ; (ಗ್ರಾಮವಾರು, ವಿಸ್ತೀರ್ಣವಾರು, ರೈತರ ಹೆಸರು ವಿಳಾಸದೊಂದಿಗೆ ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ವರಾಹಿ ಯೋಜನಾ ಪ್ರದೇಶದ ರೈತರ ನೀರಾವರಿಗಾಗಿ ತಗುಲಿದ ಕಾಲುವೆ ರಿಪೇರಿ, ವಿದ್ಯುತ್ ಬಿಲ್ ಹಾಗೂ ಇತರೆ ವೆಚ್ಚವೆಷ್ಟು? (ವರ್ಷವಾರು, ತಕ್ತೆವಾರು ವಿವರ ನೀಡುವುದು)

## ರಾಜ್ಯದಲ್ಲಿ ಕಂದಾಯ ಇಲಾಖೆಯ ಕೆಲವು ಜನಪರ ಯೋಜನೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೮೩ (೫೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ಮತ್ತು

ಸಂಧ್ಯಾ ಸುರಕ್ಷಾ ಯೋಜನೆಯಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ;

(ಆ) ರಾಜ್ಯದಲ್ಲಿ ವಿಧವಾ ವೇತನ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ಮತ್ತು ವಿಧವಾ ವೇತನ ಯೋಜನೆಯಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ;

(ಇ) ರಾಜ್ಯದಲ್ಲಿ ವೃದ್ಧಾಪ್ಯ ವೇತನ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ವೃದ್ಧಾಪ್ಯ ವೇತನ ಯೋಜನೆಯಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ;

(ಈ) ರಾಜ್ಯದಲ್ಲಿ ಅಂಗವಿಕಲ ವೇತನ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ಅಂಗವಿಕಲರ ವೇತನ ಯೋಜನೆಯಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ;

(ಉ) ರಾಜ್ಯದಲ್ಲಿ ಮನಸ್ವಿನಿ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) ಮತ್ತು ಮನಸ್ವಿನಿ ಯೋಜನೆಯಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು ?

## ಹೊಸ ತಾಲ್ಲೂಕುಗಳ ರಚನೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೮೪ (೫೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೊಸ ತಾಲ್ಲೂಕುಗಳ ರಚನೆಯ ಪ್ರಸ್ತಾವವು ಸರ್ಕಾರದ ಮುಂದೆ ಯಾವ ಹಂತದಲ್ಲಿದೆ;

(ಆ) ಹೊಸ ತಾಲ್ಲೂಕುಗಳು ನೆನೆಗುದಿಗೆ ಬಿದ್ದಿರುವುದು ನಿಜವೇ; ಹಾಗಿದ್ದಲ್ಲಿ ಹೊಸ ತಾಲ್ಲೂಕುಗಳ ರಚನೆ ಪ್ರಕ್ರಿಯೆಗೆ ಯಾವಾಗ ಚಾಲನೆ ನೀಡಲಾಗುವುದು ;

(ಇ) ಹೊಸ ತಾಲ್ಲೂಕುಗಳ ರಚನೆಗಾಗಿ ನೇಮಿಸಿದ್ದ ನಾಲ್ಕು ಸಮಿತಿಗಳ ವರದಿಯಲ್ಲಿ ಪ್ರಸ್ತಾಪಿಸಿರುವ ಆಗಿನ ಹಾಗೂ ಈಗಿನ ಸರ್ಕಾರದ ಹೊಸ ತಾಲ್ಲೂಕುಗಳು ಯಾವುವು; ಇದನ್ನು ಯಾವಾಗ ಘೋಷಣೆ ಮಾಡಲಾಗುವುದು ? (ವಿವರ ನೀಡುವುದು)

## ಬೀದರ್ ಜಿಲ್ಲೆ ಕೆರೆಗಳ ಅಭಿವೃದ್ಧಿ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೩೮೫ (೫೦೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಲ್ಲಿ ಎಲ್ಲಾ ವಿಧಾನ ಸಭಾ ಕ್ಷೇತ್ರವಾರು ಇರುವ ಒಟ್ಟು ಕೆರೆಗಳೆಷ್ಟು ;

(ಆ) ಸದರಿ ಕೆರೆಗಳ ವಿಸ್ತೀರ್ಣ ಮತ್ತು ಅಗಲ/ಆಳ ಹಾಗೆ ಎಷ್ಟು ಕೆರೆಗಳು ದೊಡ್ಡವು / ಸಣ್ಣವು, ಕೆರೆಗಳಿಂದ ಎಷ್ಟು ಗ್ರಾಮಗಳಿಗೆ ಉಪಯೋಗವಾಗಿರುತ್ತದೆ; ಇವುಗಳ ಸಂಪೂರ್ಣ ಮಾಹಿತಿ ನೀಡುವುದು

(ಇ) ಸುಮಾರು ೫ ವರ್ಷಗಳಿಂದ ಸದರಿ ಕೆರೆಗಳನ್ನು ಅಭಿವೃದ್ಧಿ ಪಡಿಸಲು ತಗಲಿರುವ ವೆಚ್ಚ ಎಷ್ಟು; (ಕೆರೆಗಳವಾರು ಮತ್ತು ತಾಲ್ಲೂಕು ಗ್ರಾಮಗಳವಾರು ಸವಿಸ್ತಾರವಾಗಿ ಮಾಹಿತಿ ನೀಡುವುದು)

(ಈ) ಉಳಿದ ಕೆರೆಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡಿರುವ ಮಹತ್ವದ ನಿರ್ಣಯಗಳೇನು ;

(ಉ) ಜಿಲ್ಲೆಯ ಅತಿ ಸೂಕ್ಷ್ಮವಾದ ಕೆರೆಗಳು ಯಾವುವು; ಹಾಗೂ ಕೆರೆಗಳ ಅಭಿವೃದ್ಧಿಗೆ ಹೊಸದಾಗಿ ಯಾವುದಾದರೂ ಯೋಜನೆಗಳ ಕುರಿತು ಜಿಲ್ಲೆಯಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ? (ಇದರ ಮಾಹಿತಿ ಒದಗಿಸುವುದು)

## ಮದ್ದೂರು ತಾಲ್ಲೂಕಿನ ಬಾಣಜಿಪಂತು ಏತ ನೀರಾವರಿ ಯೋಜನೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೮೬ (೫೧೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮದ್ದೂರು ತಾಲ್ಲೂಕಿನ ಬಾಣಜಿಪಂತು ಏತ ನೀರಾವರಿ ಯೋಜನೆಗೆ ಹೊಸದಾಗಿ ಪಂಪ್ ಮೋಟಾರನ್ನು ಅಳವಡಿಸಲು ಮಾನ್ಯ ಸಚಿವರು ಹಿಂದಿನ ಸದನದಲ್ಲಿ ತಿಳಿಸಿದ್ದರು; ಈಗ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಏತ ನೀರಾವರಿ ಯೋಜನೆಯ ನೀರು ಸರಬರಾಜು ಮಾಡುವ ಪಂಪ್‌ಗಳು ತುಂಬಾ ಹಳೆಯದಾಗಿದ್ದು ಹೊಸದಾಗಿ ಅಳವಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ? (ವರದಿ ನೀಡುವುದು)

**ಮದ್ದೂರು ತಾಲ್ಲೂಕು ಸೂಳೆಕೆರೆ ದಕ್ಷಿಣ ನಾಲಾ ಸೇತುವೆ**

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೮೭ (೫೦೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮದ್ದೂರು ತಾಲ್ಲೂಕು ಸೂಳೆಕೆರೆ ದಕ್ಷಿಣ ನಾಲೆಯ ಸೇತುವೆ ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕುಸಿದು ಬಿದ್ದಿರುವ ಸೇತುವೆಯಿಂದ ಜನ ಜಾನುವಾರುಗಳು ಓಡಾಡಲು ತೊಂದರೆಯಾಗುತ್ತಿದ್ದು ಸೇತುವೆಯನ್ನು ದುರಸ್ತಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು ? (ಪೂರ್ಣ ಮಾಹಿತಿ ನೀಡುವುದು)

**ಉಮ್ಮತ್ತೂರು ಅರಣ್ಯ ಪ್ರದೇಶದಲ್ಲಿರುವ ಕೃಷ್ಣಮೃಗ ಸಂತತಿಯ ರಕ್ಷಣೆ**

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೩೮೮ (೫೧೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆ ಉಮ್ಮತ್ತೂರು ಅರಣ್ಯ ಪ್ರದೇಶದಲ್ಲಿರುವ ವಿನಾಶದ ಅಂಚಿನಲ್ಲಿರುವ ಕೃಷ್ಣಮೃಗ (black buck)

ಸಂತತಿಯನ್ನು ರಕ್ಷಿಸಿ ಉಳಿಸಿ ಬೆಳೆಸಲು ಈ ಅರಣ್ಯ ಪ್ರದೇಶವನ್ನು ಅಭಯಾರಣ್ಯ ಎಂದು ಘೋಷಿಸಲಾಗುವುದೇ ;

(ಆ) ವಿನಾಶದ ಅಂಚಿನಲ್ಲಿರುವ ಈ ಕೃಷ್ಣಮೃಗಗಳ ಸಂಖ್ಯೆಯ ಬಗ್ಗೆ ಸರ್ವೇ ನಡೆಸಿ ಇವುಗಳ ರಕ್ಷಣೆಗೆ ಉಳಿವಿಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ ; (ಇದ್ದಲ್ಲಿ ವಿವರ ಒದಗಿಸುವುದು)

(ಇ) ತಕ್ಷಣ ಈ ಗುಡ್ಡಗಾಡು ಪ್ರದೇಶದ ಅರಣ್ಯವನ್ನು ಅಭಯಾರಣ್ಯವಾಗಿ ಘೋಷಿಸಿ ಸುತ್ತಲೂ ಬೇಲಿಯನ್ನು ನಿರ್ಮಿಸಲು. ಅರಣ್ಯ ಕಾವಲು ಪಡೆ ನಿಯೋಜಿಸಲು ಕ್ರಮ ಜರುಗಿಸಲಾಗುವುದೇ ?

## ಎಚ್.ಪಿ.ಸಿ.ಎಲ್ ಅನಿಲ ಕೊಳವೆ ಮಾರ್ಗಕ್ಕೆ ಭೂಸ್ವಾಧೀನ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೩೮೯ (೫೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಎಚ್.ಪಿ.ಸಿ.ಎಲ್ ಅನಿಲ ಕೊಳವೆ ಮಾರ್ಗಕ್ಕೆ ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; (ಪೂರ್ಣ ವಿವರ ಒದಗಿಸುವುದು)

(ಆ) ಈ ಭೂಮಿಗೆ ಒಂದು ಎಕರೆಗೆ ನಿಗಧಿ ಪಡಿಸಿರುವ ಪರಿಹಾರ ಮತ್ತು ಬೆಳೆ ಹಾನಿಗೆ ನಿಗಧಿ ಪಡಿಸಿರುವ ಪರಿಹಾರದ ಮೊತ್ತ ಎಷ್ಟು; ಈ ಪರಿಹಾರದ ಹಣವನ್ನು ರೈತರಿಗೆ ವಿತರಣೆ ಮಾಡಲಾಗಿದೆಯೇ ;

(ಇ) ಈ ಭೂಮಿಯ ಬಗ್ಗೆ ರೈತರ ಅಂದರೆ ಭೂ ಮಾಲೀಕರ ಬೇಡಿಕೆಗಳೇನು; ಈ ಬೇಡಿಕೆಗಳನ್ನು ಈಡೇರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ನಂಜನಗೂಡು ತಾಲ್ಲೂಕು ಹಳೆಪುರ ಕೆರೆಯನ್ನು ಜೀರ್ಣೋದ್ಧಾರ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೩೯೦ (೫೧೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಂಜನಗೂಡು ತಾಲ್ಲೂಕು ಹಳೆಪುರ ಕೆರೆಯನ್ನು ಜೀರ್ಣೋದ್ಧಾರ ಮಾಡಿ, ಹೂಳು ತೆಗೆದು ಕೆರೆಯಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ನಿರ್ಮೂಲನ ಮಾಡಿ ಕಬಿನಿ ನಾಲಾ ನೀರನ್ನು ಈ ಕೆರೆಗೆ ಹರಿಸಿ ಕೃಷಿಗೆ ಮತ್ತು ಅಂತರ್ಜಲ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗುವುದೇ ;

(ಆ) ೨೦೦೭ರಲ್ಲಿ ಈ ಕೆರೆಗೆ ನೀರು ತುಂಬಿಸಲು ನಿರ್ಮಿಸಿದ ಚೆಕ್ ಡ್ಯಾಂ ವಿಫಲವಾಗಲು ಕಾರಣಗಳೇನು; ಇದಕ್ಕೆ ತಗುಲಿದ ವೆಚ್ಚ ಎಷ್ಟು; ಈ ಚೆಕ್ ಡ್ಯಾಂ ನಿಂದ ಕೆರೆಯವರೆಗೆ ತೋಡಿರುವ ಕಾಲುವೆಗೆ ಮಾಡಿರುವ ಭೂಸ್ವಾಧೀನಕ್ಕೆ ಇದುವರೆಗೆ ರೈತರಿಗೆ ಪರಿಹಾರ ನೀಡದೇ ಇರುವುದು ಗಮನಕ್ಕೆ ಬಂದಿದೆಯೇ ? (ಪೂರ್ಣ ವಿವರಗಳನ್ನು ಒದಗಿಸುವುದು)

## ರಾಜ್ಯದಲ್ಲಿರುವ ಗಾರ್ಮೆಂಟ್ ಉದ್ಯಮ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣಯ್ಯ)(ನಾಮ ನಿರ್ದೇಶನ ಹೊಂದಿದವರು) :-**

೩೯೧ (೫೧೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಜವಳಿ ಉದ್ಯಮದಲ್ಲಿ ತೊಡಗಿರುವ ಗಾರ್ಮೆಂಟ್ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸರ್ಕಾರದ ಸಹಾಯಧನ ಪಡೆದು ನಿರಂತರವಾಗಿ ನಡೆಯುತ್ತಿರುವ ಗಾರ್ಮೆಂಟ್ ಉದ್ಯಮಗಳು ಯಾವುವು ; (ಗಾರ್ಮೆಂಟ್ ಉದ್ಯಮಕ್ಕೆ ಸರ್ಕಾರದ ಸಹಾಯಧನದ ಸವಲತ್ತುಗಳು ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಇ) ನೂತನ ಜವಳಿ ನೀತಿ ಬಂದ ಮೇಲೆ ಜವಳಿ ಉದ್ಯಮದಲ್ಲಿ ಯಾವ್ಯಾವ ಯೋಜನೆ ಎಷ್ಟು ಕಂಪನಿಗಳಿಗೆ ಯಾರ್‍ಯಾರಿಗೆ ಸಹಾಯಧನ ನೀಡಲಾಗಿದೆ ;

(ಈ) ಸಹಾಯಧನ ನೀಡುವಾಗ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು ?

## ಗುಡಿಕೈಗಾರಿಕೆಯಾದ ನೇಕಾರಿಕೆಯನ್ನು ಪ್ರೋತ್ಸಾಹಿಸುವುದು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣಯ್ಯ)(ನಾಮ ನಿರ್ದೇಶನ ಹೊಂದಿದವರು) :-**

೩೯೨ (೫೧೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ನೇಕಾರಿಕೆ ವೃತ್ತಿಯನ್ನು ಗುಡಿಕೈಗಾರಿಕೆ ಹಾಗೂ ಕರ ಕುಶಲತೆ ಎಂದು ಯಾವಾಗ ಘೋಷಿಸಲಾಗಿದೆ ;

(ಆ) ಹಾಗಿದ್ದಲ್ಲಿ, ಬೆಂಗಳೂರು ಹಾಗೂ ನಗರ ವ್ಯಾಪ್ತಿಯಲ್ಲಿ ಬಹಳ ವರ್ಷದಿಂದ ನೇಕಾರಿಕೆ ಮಾಡುತ್ತಿರುವ ಬಡ ನೇಕಾರರನ್ನು ಬೇರೆ ಬೇರೆ ಇಲಾಖೆಯವರು ಗಲಾಟೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ;

(ಇ) ಸ್ವಾತಂತ್ರ್ಯ ಪೂರ್ವದಿಂದ ನಡೆದುಬಂದ ನೇಕಾರಿಕೆಯನ್ನೇ ಅವಲಂಬಿಸಿರುವ ಬಡ ನೇಕಾರರನ್ನು ಒಕ್ಕಲೆಬ್ಬಿಸುವ ತಂತ್ರಗಾರಿಕೆಗೆ ಕಡಿವಾಣವಿಲ್ಲವೇ ;

(ಈ) ನೇಕಾರಿಕೆಯನ್ನು ಬಿಡಿಸಲು ಅಥವಾ ನೇಕಾರರನ್ನು ನಗರಗಳಿಂದ ಹೊರಗೆ ಕಳುಹಿಸಲು ಸರ್ಕಾರ ಆದೇಶ ಮಾಡಲಾಗಿದೆಯೇ;

(ಉ) ಹಾಗಿದ್ದಲ್ಲಿ, ಬಡ ನೇಕಾರರಿಗೆ ಮುಂದಿನ ವ್ಯವಸ್ಥೆ ಏನು ?

## ಯುವಕರಿಗೆ ಹೆಚ್ಚಿನ ಪ್ರೋತ್ಸಾಹ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣಯ್ಯ)(ನಾಮ ನಿರ್ದೇಶನ ಹೊಂದಿದವರು) :–**

೩೯೩ (೫೧೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯುವಜನ ಮತ್ತು ಕ್ರೀಡೆಗೆ ಸರ್ಕಾರ ನೀಡಿರುವ ಸವಲತ್ತುಗಳೇನು; (ಪೂರ್ಣ ವಿವರ ನೀಡುವುದು)

(ಆ) ಈ ವರ್ಷ ಆಯವ್ಯಯದಲ್ಲಿ ನೀಡಿರುವ ಹಣವೆಷ್ಟು;

(ಇ) ಇಲಾಖೆಯಲ್ಲಿ ಯಾವ ರೀತಿ ಯೋಜನೆ ಮಾಡಲಾಗಿದೆ;

(ಈ) ಯುವ ಜನತೆಗೆ ಪ್ರೋತ್ಸಾಹಿಸಲು ಸರ್ಕಾರ ನೀಡುತ್ತಿರುವ ಕೊಡುಗೆ ಸಾಲದು ಎಂದು ದೂರುಗಳು ಬಂದಿರುವುದೆ;

(ಉ) ಹಾಗಿದ್ದಲ್ಲಿ ಮುಂದಿನ ಆಯವ್ಯಯದಲ್ಲಿ ಹೆಚ್ಚಿನ ನಿರೀಕ್ಷೆ ಮಾಡಬಹುದೆ ?

## ಕೈಮಗ್ಗ ನೇಕಾರರ ಸಹಕಾರ ಸಂಘಗಳ ನಷ್ಟ ಭರಿಸುವ ಕುರಿತು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣಯ್ಯ)(ನಾಮ ನಿರ್ದೇಶನ ಹೊಂದಿದವರು) :–**

೩೯೪ (೫೧೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಬಹಳ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಜಿಲ್ಲಾವಾರು ಯಾವ್ಯಾವ ಸಂಘಗಳು ನಷ್ಟದಲ್ಲಿ ಇವೆ ಮಾಹಿತಿ ನೀಡುವುದು;

(ಇ) ನಷ್ಟ ಅನುಭವಿಸುತ್ತಿರುವ ಸಹಕಾರ ಸಂಘಗಳ ಬೇಡಿಕೆ ಏನು;

(ಈ) ಸರ್ಕಾರ ಪುನಃಶ್ಚೇತನ ಯೋಜನೆ ಅಡಿಯಲ್ಲಿ ಈ ಎಲ್ಲಾ ಸಂಘಗಳಿಗೆ ನೆರವು ನೀಡಲು ಮುಂದಾಗಿರುವುದೆ;

(ಉ) ಹಾಗಿದ್ದಲ್ಲಿ ಯಾವಾಗ ನೀಡಲಾಗುವುದು ?

## ಅಸಂಘಟಿತ ನೇಕಾರರಿಗೆ ಸರ್ಕಾರದ ಸೌಲಭ್ಯ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣಯ್ಯ)(ನಾಮ ನಿರ್ದೇಶನ ಹೊಂದಿದವರು) :–**

೩೯೫ (೫೧೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸ ಜವಳಿ ನೀತಿಯಲ್ಲಿ ಅಸಂಘಟಿತ ಬಡ ನೇಕಾರರಿಗೆ ನೀಡಲಾದ ಕೊಡುಗೆ ಏನು ;

(ಆ) ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಗಳಲ್ಲಿ ಹೆಚ್ಚಿನ ಅಸಂಘಟಿತರಾದ ನೇಕಾರರು ಇದ್ದಾರೆ ;

(ಇ) ಅಸಂಘಟಿತ ಬಡ ನೇಕರರ ಬಗ್ಗೆ ಜವಳಿ ಇಲಾಖೆ ಪ್ರತ್ಯೇಕವಾಗಿ ಯಾವುದಾದರೂ ಯೋಜನೆ ನೀಡಿರುವುದೆ ;

(ಈ) ಇತ್ತೀಚೆಗೆ ವೃತ್ತಿ ಆಧಾರವಾಗಿ ಅನೇಕ ಪ್ರಾಧಿಕಾರ ರಚನೆ ಮಾಡುತ್ತಿದ್ದು, ಬಡ ನೇಕಾರರ ಪ್ರಾಧಿಕಾರ ರಚನೆ ಮಾಡಲು ಇಲಾಖೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ ;

(ಉ) ಮಾಡದಿದ್ದಲ್ಲಿ, ಈ ವರ್ಷದಲ್ಲಿ ಪ್ರಾಧಿಕಾರ ರಚನೆ ಮಾಡಲು ಶಿಫಾರಸ್ಸು ಮಾಡಲಾಗುವುದೆ ?

## ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡ ನಿವೇಶನ ರಹಿತರಿಗೆ ಹಕ್ಕುಪತ್ರದ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೩೯೬ (೫೨೯) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ನಿವೇಶನ ರಹಿತ ಕಡು ಬಡ ಕುಟುಂಬದವರು ಅನೇಕ ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಹಕ್ಕುಪತ್ರ ಸಿಗದೆ ಸರ್ಕಾರಿ ಯೋಜನೆಗಳಿಂದ ವಂಚಿತವಾಗಿ ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾಹಿತಿ ಕೊರತೆಯಿಂದ ಅರ್ಜಿ ಸಲ್ಲಿಸದೇ ಇದ್ದವರಿಗೆ ಪುನಃ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದೇ;

(ಇ) ಸರ್ಕಾರ ಜಮೀನು ಮಂಜೂರು ಮಾಡಲು ಇರುವ ಮಾನದಂಡಗಳೇನು ಮತ್ತು ಎಷ್ಟು ವಿಸ್ತೀರ್ಣದ ಜಮೀನು ಮಂಜೂರು ಮಾಡಲಾಗುವುದು ?

## ಸರ್ಕಾರಿ ಜಮೀನು ಮಂಜೂರಾತಿ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೯೭ (೫೨೦) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೊಣಕೆರೆ ಹೋಬಳಿ, ಕನಗೋನಹಳ್ಳಿ ಗ್ರಾಮದಲ್ಲಿ ೨೦೦೫ರಿಂದೀಚೆಗೆ ಎಷ್ಟು ರೈತರಿಗೆ ಸರ್ಕಾರದ ಜಮೀನನ್ನು ಮಂಜೂರು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಆ) ಈ ರೀತಿ ಸರ್ಕಾರವು ಮಂಜೂರು ಮಾಡಿದ್ದ ಜಮೀನನ್ನು ಫಲಾನುಭವಿಗಳು ಉಪಯೋಗಿಸುತ್ತಿರುವರೇ;

(ಇ) ಸರ್ಕಾರವು ಮಂಜೂರು ಮಾಡಿದ್ದ ಜಮೀನಿಗೆ ವಿಧಿಸಿದ್ದ ಶುಲ್ಕವೆಷ್ಟು; ಸದರಿ ಶುಲ್ಕವನ್ನು ಪಾವತಿಸಿರುವ ಹಾಗೂ ಪಾವತಿಸದೇ ಇರುವ ರೈತರ ವಿವರ ನೀಡುವುದು; ಶುಲ್ಕವನ್ನು ಪಾವತಿಸದಿರುವ ರೈತರಿಗೆ ಸರ್ಕಾರವು ಕಾಲಾವಕಾಶ ನೀಡಲು ತೆಗೆದುಕೊಂಡಿರುವ ಕ್ರಮಗಳೇನು ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನಿರ್ವಹಿಸಲಾದ ಕಾಮಗಾರಿಗಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೩೯೮ (೫೨೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ೧೦ ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ವಹಿಸಲಾದ ಕಾಮಗಾರಿಗಳು

ಯಾವುವು; ಪ್ರಸ್ತುತ ಈ ಕಾಮಗಾರಿಗಳು ಯಾವ ಹಂತದಲ್ಲಿವೆ;

(ಆ) ಈ ಕಾಮಗಾರಿಗಳ ಪ್ರಾರಂಭಿಕ ಅಂದಾಜು ವೆಚ್ಚ ಎಷ್ಟು; ಪೂರ್ಣಗೊಂಡ ಬಳಿಕ ವೆಚ್ಚವಾದ ಮೊತ್ತವೆಷ್ಟು ?

## ಕ್ರೀಡಾ ಕ್ಲಬ್‌ಗಳ ಮೇಲೆ ಸರಕಾರದ ನಿಯಂತ್ರಣ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೩೯ (೫೨೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿರುವ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಮತ್ತು ಗಾಲ್ಫ್ ಕ್ಲಬ್ ಫುಟ್‌ಬಾಲ್ ಅಸೋಸಿಯೇಷನ್, ಈ ತರಹದ ಕ್ರೀಡಾ ಸಂಸ್ಥೆಗಳ ಮೇಲೆ ಸರಕಾರದ ನಿಯಂತ್ರಣ ಇದೆಯೇ ;

(ಆ) ಸದರಿ ಯಾವ ಯಾವ ಸಂಸ್ಥೆಗಳಿಗೆ ಸರಕಾರದಿಂದ ನೀಡಿದ ಭೂಮಿ ಎಷ್ಟು (ವಿವರ ನೀಡುವುದು); ಅವು ಸರಕಾರದ ನಿಯಮ ಪಾಲಿಸುತ್ತಿವೆಯೇ ? (ವಿವರ ನೀಡುವುದು)

## ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿಯ ಕರ್ತವ್ಯಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೦ (೫೩೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿಯ ಉದ್ದೇಶಗಳೇನು;

(ಆ) ಇದರ ವ್ಯಾಪ್ತಿಯಲ್ಲಿ ಯಾವ ಯಾವ ಹಂತದ ಕಾರ್ಮಿಕರು ಒಳಗೊಳ್ಳುತ್ತಾರೆ ;

(ಇ) ಸದರಿ ಯೋಜನೆಯಿಂದ ಕಾರ್ಮಿಕರಿಗಾಗುವ ಉಪಯೋಗಗಳೇನು ? (ವಿವರ ನೀಡುವುದು)

## ೯೪ ಸಿ ವ್ಯವಸ್ಥೆಗೆ ಬದಲಿ ವ್ಯವಸ್ಥೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೧ (೫೩೫) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಈಗಾಗಲೇ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಿರುವ ಬಡವರ ನಿವೇಶನ ಮಂಜೂರಾತಿಗೆ ೯೪ ಸಿ ಸರ್ಕಾರ ತಂದಿದ್ದು, ನಗರ ಪ್ರದೇಶದಲ್ಲಿ ೫ ರಿಂದ ೧೦ ಕಿ.ಮೀ ವ್ಯಾಪ್ತಿಯಲ್ಲಿ ೯೪ ಸಿ ಅನ್ವಯಿಸುವುದಿಲ್ಲ ಎಂಬ ಸರ್ಕಾರದ ಆದೇಶ ನಿಜವೇ;

(ಆ) ಆದ್ದರಿಂದ ನಗರ ಪ್ರದೇಶ ಗಡಿ ರೇಖೆಯ ಸುತ್ತಲು ೯ಳ ಸಿ ಮನೆಯವರಿಗೆ ಸರ್ಕಾರ ಬದಲಿ ವ್ಯವಸ್ಥೆ ಏನು ಮಾಡಲಿದೆ; ;

(ಇ) ಗ್ರಾಮಾಂತರದಲ್ಲಿ ನಗರ ಗಡಿ ರೇಖೆಯ ಸುತ್ತಲ ಪ್ರದೇಶದಲ್ಲಿ ವಾಸಿಸುವವರು ೯ಳ ಸಿ ವ್ಯಾಪ್ತಿಯಿಂದ ವಂಚಿತರಾಗುವುದು ಬಡವರಿಗಾದ ತೊಂದರೆ ಎಂದು ಸರ್ಕಾರಕ್ಕೆ ಅರ್ಥವಾಗಿದೆಯೇ;

(ಈ) ಮೇಲಿನ ಸಮಸ್ಯೆ ಸರಿಪಡಿಸಲು ಸರ್ಕಾರದ ಕ್ರಮವೇನು ?

## ಮನಸ್ವಿನಿ ಯೋಜನೆಯ ಆದಾಯದ ಮಿತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೨ (೫೩೩) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

(ಅ) ಬಡ ಅವಿವಾಹಿತ ಮಹಿಳೆಯರ ಜೀವನಕ್ಕೆ ಆರ್ಥಿಕ ನೆರವು ನೀಡುವ ಮನಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಎಷ್ಟು ಮಂದಿಗೆ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ತಾಲ್ಲೂಕುವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಮನಸ್ವಿನಿ ಯೋಜನೆಗೆ ಆದಾಯದ ಪರಿಮಿತಿ ಎಷ್ಟು ;

(ಇ) ಮನಸ್ವಿನಿ ಯೋಜನೆಯ ಮೊತ್ತವನ್ನು ಏರಿಸಲು ಸರ್ಕಾರ ಯೋಚಿಸಿದೆಯೇ ?

## ಭೂ ಸುಧಾರಣಾ ಕಾಯ್ದೆಯನ್ನು ಸುಧಾರಿಸಿ ಸರಳೀಕರಣ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೩ (೫೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಭೂಸುಧಾರಣಾ ಕಾಯ್ದೆ ೧೯೬೧ರನ್ವಯ ಭೂಮಿಯ ಖರೀದಿ ಅಥವಾ ವರ್ಗಾವಣೆಗೆ ನಿಗದಿಪಡಿಸಿರುವ ಷರತ್ತುಗಳೇನು ;

(ಆ) ಹಿಂದೆ ಜಾರಿಗೆ ತಂದಿದ್ದ ಈ ಷರತ್ತುಗಳು ಪ್ರಸ್ತುತ ಸ್ಥಿತಿಗೆ ಹೊಂದಾಣಿಕೆಯಾಗುತ್ತಿವೆಯೇ; ಇಲ್ಲದಿದ್ದಲ್ಲಿ, ಕಾಲಕಾಲಕ್ಕೆ ಕಾಯ್ದೆಯ ತಿದ್ದುಪಡಿಗೆ ಕೈಗೊಂಡ ಕ್ರಮಗಳೇನು ; (ಕೈಗೊಂಡ ಕ್ರಮಗಳ ಸಹಿತ ವಿವರ ನೀಡುವುದು) ;

(ಇ) ಕಾಯ್ದೆ ಜಾರಿಗೆ ಬಂದ ಸಮಯದಲ್ಲಿ ಇದ್ದಷ್ಟೇ ಭೂಮಿಯ ಮೌಲ್ಯವು ಈಗಲೂ ಇದೆಯೇ ; ಇಲ್ಲವಾದಲ್ಲಿ ನಿಗದಿಪಡಿಸಿದ ಷರತ್ತುಗಳಲ್ಲಿ ರೈತರ ಕೃಷಿಯೇತರ ಆದಾಯದ ಮಿತಿಯನ್ನು ಹೆಚ್ಚಿಸಲು ಕ್ರಮ ಕೈಗೊಂಡಿದೆಯೇ ; (ಕೈಗೊಂಡಿದ್ದಲ್ಲಿ ಕೈಗೊಂಡ ಕ್ರಮಗಳ ವಿವರ ತಿಳಿಸುವುದು) ಇಲ್ಲವಾದಲ್ಲಿ ವರ್ತಮಾನದ ಸ್ಥಿತಿಗತಿಗಳಿಗೆ ಸಂಬಂಧಪಟ್ಟಂತೆ ಆದಾಯದ ಮಿತಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಈ) ಈ ಷರತ್ತುಗಳು ಜಾರಿಗೆ ಬಂದಾಗ ಇದ್ದ ನೋಂದಣಿ ಶುಲ್ಕಕ್ಕೂ ಈಗಿನ ನೋಂದಣಿ ಶುಲ್ಕಕ್ಕೂ ವ್ಯತ್ಯಾಸವಾಗಿರುವುದು ನಿಜವೇ ; ಇದ್ದಲ್ಲಿ ಇದನ್ನಾಧರಿಸಿ ಭೂ ಖರೀದಿಗೆ ರೈತರ ಕೃಷಿಯೇತರ ಆದಾಯ ಮಿತಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ;

ಕೈಗೊಳ್ಳುವುದಾದರೆ ಎಷ್ಟು ಸಮಯದಲ್ಲಿ ಮಿತಿಯನ್ನು ಸಡಿಲಿಸಿ ಆದಾಯವನ್ನು ಹೆಚ್ಚಿಸಲಾಗುವುದು ;

(ಉ) ಮಳೆಯನ್ನಾಧರಿಸಿ ವ್ಯವಸಾಯವನ್ನವಲಂಭಿಸಿರುವ ನಮ್ಮ ರೈತರು ಬೇರೆ ಉಪಕಸುಬುಗಳನ್ನು ಕೈಗೊಂಡಾಗ ಸಣ್ಣ ಪ್ರಮಾಣದ ಆದಾಯ ಬರುತ್ತಿರುವ ಸಂದರ್ಭದಲ್ಲಿ ಹಿಂದೆ ಓಬಿರಾಯನ ಕಾಲದಲ್ಲಿ ಕೈಗೊಂಡ ಭೂ ಖರೀದಿಯ ಆದಾಯದ ಮಿತಿಯನ್ನು ಸಡಿಲಿಸಿ ಸಮಸ್ತ ರೈತ ಕುಲಬಾಂಧವರಿಗೆ ಅನುಕೂಲ ಮಾಡಿಕೊಡಲಾಗುವುದೇ (ಈ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ವಿವರ ಒದಗಿಸುವುದು) ?

## ಅಸಂಘಟಿತ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೪ (೫೪೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಇರುವ ಒಟ್ಟು ಅಸಂಘಟಿತ ಕಾರ್ಮಿಕರು ಎಷ್ಟು ; ಇಂತಹ ಅಸಂಘಟಿತ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಗಳು ಅಸಂಘಟಿತ ಕಾರ್ಮಿಕರಿಗೆ ತಲುಪಿಸಲು ಕೈಗೊಂಡ ಕ್ರಮಗಳೇನು ;

(ಇ) ಇಂತಹ ಕಟ್ಟಡ ಕಾರ್ಮಿಕರಲ್ಲಿ ವಿಶೇಷವಾಗಿ ಗರ್ಭಿಣಿ ಮಹಿಳೆಯವರು ಚಿಕ್ಕ ಮಕ್ಕಳು ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರವು ವಿಶೇಷ ಯೋಜನೆಗಳನ್ನು ಕೈಗೊಂಡಿದೆಯೇ ; ಕೈಗೊಂಡಿದ್ದರೆ ಅವುಗಳ ವಿವರ ಒದಗಿಸುವುದು ;

(ಉ) ಕಟ್ಟಡ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗರ್ಭಿಣಿ ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಯೋಜನೆ ರೂಪಿಸಿದ್ದರೆ ಅದರ ವಿವರ ಒದಗಿಸುವುದು ?

## ಬಳ್ಳಾರಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೦೫ (೫೩೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡುವ ವಿಚಾರ ಯಾವ ಹಂತದಲ್ಲಿದೆ ;

(ಆ) ಜಿಲ್ಲೆಯಲ್ಲಿ ಒಟ್ಟು ಎಷ್ಟು ಜವಳಿ ಉದ್ಯಮಗಳಿವೆ ; (ವಿವರ ನೀಡುವುದು) ;

(ಇ) ಜವಳಿ ಪಾರ್ಕ್ ಸ್ಥಾಪನೆಗೆ ಸ್ಥಳ ಗುರುತಿಸಲಾಗಿದೆಯೇ ; ಹಾಗಿದ್ದಲ್ಲಿ ಎಲ್ಲಿ ; ಹಾಗೂ ಎಷ್ಟು ಎಕರೆ ಗುರುತಿಸಲಾಗಿದೆ ; (ವಿವರ ನೀಡುವುದು) ;

(ಈ) ಈ ಉದ್ದೇಶಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ ; ಈವರೆಗೂ ಎಷ್ಟು ಬಿಡುಗಡೆಗೊಳಿಸಲಾಗಿದೆ ?

**ಬಳ್ಳಾರಿ ಜಿಲ್ಲೆಯಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರಗಳ ಕುರಿತು**

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೬ (೫೩೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೈಗಾರಿಕಾ ತರಬೇತಿ ಕೇಂದ್ರಗಳಿವೆ ;

(ಆ) ಇವುಗಳಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಇತರ ಕೇಂದ್ರಗಳೆಷ್ಟು; ತಾಲ್ಲೂಕುವಾರು ವಿವರ ನೀಡುವುದು ;

(ಇ) ಇದರಲ್ಲಿ ಎಷ್ಟು ತರಬೇತಿ ಕೇಂದ್ರಗಳು ಮೂಲಭೂತ ಸೌಕರ್ಯಗಳನ್ನು ಹೊಂದಿಲ್ಲ ;

(ಈ) ಜಿಲ್ಲೆಯಲ್ಲಿ ಈಗ ಅನುದಾನ ಪಡೆಯಲು ಬಾಕಿ ಇರುವ ಕೈಗಾರಿಕಾ ಕೇಂದ್ರಗಳ ಸಂಖ್ಯೆ ಎಷ್ಟು ?

**ಬಳ್ಳಾರಿ ಜಿಲ್ಲೆಯಲ್ಲಿ ಕರಡಿಧಾಮಗಳ ಸ್ಥಾಪನೆ**

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೭ (೫೩೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಕಡೆ ಕರಡಿಧಾಮಗಳ ಸ್ಥಾಪನೆ ಮಾಡಲು ಸರ್ಕಾರ ಯೋಚಿಸಿದೆ ; (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈವರೆಗೂ ಕರಡಿಧಾಮಗಳ ಸ್ಥಾಪನೆ ಆಗದಿರುವುದರಿಂದ ಪದೇ ಪದೇ ಕರಡಿ ದಾಳಿ ನಡೆದು ಪ್ರಾಣಹಾನಿ, ಮಾರಣಾಂತಿಕ ಹಾನಿ ಮತ್ತು ಬೆಳೆಹಾನಿ ಸಂಭವಿಸುತ್ತಿರುವುದರಿಂದ ಶೀಘ್ರವಾಗಿ ಕರಡಿಧಾಮಗಳನ್ನು ಸ್ಥಾಪನೆ ಮಾಡಲಾಗುವುದೆ ;

(ಇ) ಈ ಹಿಂದೆ ಸರ್ಕಾರ ತಿಳಿಸಿದಂತೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗುಡೆಕೋಟೆ ಹತ್ತಿರ ಕರಡಿಧಾಮ ಸ್ಥಾಪಿಸಲಾಗಿದೆಯೇ, ಇಲ್ಲದಿದ್ದಲ್ಲಿ ಈ ವಿಚಾರ ಈಗ ಯಾವ ಹಂತದಲ್ಲಿದೆ ಮತ್ತು ಎಷ್ಟು ಶೀಘ್ರವಾಗಿ ಅಲ್ಲಿ ಕರಡಿಧಾಮ ಸ್ಥಾಪಿಸಲಾಗುತ್ತದೆ ?

## ಕಲಂ ೩೭೧ಜೆ ಅಡಿಯಲ್ಲಿ ಸವಲತ್ತುಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೦೮ (೫೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಂ ೩೭೧ಜೆ ಅಡಿಯಲ್ಲಿ ಸವಲತ್ತು ಪಡೆಯಲು ಹೈದ್ರಾಬಾದ್ ಕರ್ನಾಟಕ ಭಾಗದ ೬ ಜಿಲ್ಲೆಗಳವರು ಅರ್ಹತಾ ಪತ್ರ ಪಡೆಯಲು ಅಳವಡಿಸಿರುವ ನಿಯಮ ತುಂಬ ಗೋಜಲಾಗಿದೆ, ಅನೇಕ ದಾಖಲೆಗಳನ್ನು ಕೇಳಲಾಗುತ್ತಿದೆ ದಿನಕ್ಕೊಂದು ಹೊಸ ದಾಖಲೆ ಕೊಡುವಂತೆ ಕಂದಾಯ ಇಲಾಖೆಯವರು ಅರ್ಜಿದಾರರನ್ನು ಪೀಡಿಸುತ್ತಿದ್ದಾರೆ ಎಂಬ ದೂರುಗಳಿವೆ, ಇದು ನಿಜವೇ ; ಈ ಪ್ರಮಾಣಪತ್ರ ವಿತರಣೆಯಲ್ಲಿ ಈ ಪದ್ಧತಿಯನ್ನು ಸರಳಗೊಳಿಸುವುದೇ ; ಅರ್ಹತಾ ಪತ್ರ ಹೈದ್ರಾಬಾದ್ ಕರ್ನಾಟಕ ನಿವಾಸಿಗಳ ಹಕ್ಕು ಅದನ್ನು ನೀಡಲು ಪಕ್ಕಾ ಪೂರ್ಣ ಪ್ರಮಾಣದ

ಪದ್ಧತಿ ರೂಪಿಸಬೇಕಲ್ಲವೆ ; ಈಗಿರುವ ಪದ್ಧತಿಯಲ್ಲಿ ಗೊಂದಲ ನಿವಾರಣೆಗೆ ಸರಕಾರ ಯಾವ ಕ್ರಮ ಕೈಗೊಳ್ಳಲಿದೆ ; (ಸಂಪೂರ್ಣ ಮಾಹಿತಿ ನೀಡುವುದು) ;

(ಆ) ೩೭೧ಜೆ ಅರ್ಹತಾ ಪ್ರಮಾಣಪತ್ರ ಸಂಪೂರ್ಣ ಪ್ರಕ್ರಿಯೆ ಗಣಕೀಕರಣಗೊಳಿಸಿ ಪಾರದರ್ಶಕತೆ ತರುವ ಮೂಲಕ ಅರ್ಜಿದಾರರು ಕಛೇರಿ ಅಲೆದಾಡುವುದನ್ನು ತಪ್ಪಿಸಿ ತಕ್ಷಣ ಪ್ರಮಾಣ ಪತ್ರ ತೊಂದರೆ ಇಲ್ಲದೆ ಅವರ ಕೈ ಸೇರುವಂತಾಗಲು ಸರಳ ಹಾಗೂ ಎಲ್ಲರೂ ಒಪ್ಪುವ ವ್ಯವಸ್ಥೆ ಸರಕಾರ ಹುಡುಕುವುದೆ ; ಹಾಗಾದರೆ ; ಯಾವ ವಿಧದಲ್ಲಿ ಪ್ರಮಾಣಪತ್ರ ನೀಡಬೇಕೆಂದು ಸರಕಾರ ಚಿಂತನೆ ನಡೆಸಿದೆ (ಸಂಪೂರ್ಣ ಮಾಹಿತಿ ಒದಗಿಸುವುದು) ?

## ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೦೯ (೫೪೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವ ಯೋಜನೆಗಳು ಯಾವುವು, ಅವುಗಳಿಗೆ ಮೀಸಲಿಟ್ಟ ಹಣವೆಷ್ಟು ; (ಯೋಜನಾವಾರು ವಿವರ ನೀಡುವುದು) ;

(ಆ) ಇಲಾಖೆಯು ವತಿಯಿಂದ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು ; ಅವುಗಳ ರೂಪರೇಷಗಳೇನು ; (ಯೋಜನಾವಾರು ವಿವರ ಒದಗಿಸುವುದು) ;

(ಇ) ಕಳೆದ ೨ ವರ್ಷದಲ್ಲಿ ಜಿಲ್ಲೆಯಲ್ಲಿ ಇಲಾಖೆ ಇದುವರೆಗೆ ಸಾಧಿಸಿದ ಪ್ರಗತಿ ಏನು (ಅಂಕಿ ಅಂಶಗಳೊಂದಿಗೆ ವಿವರ ನೀಡುವುದು) ?

## ಕೃಷ್ಣಭಾಗ್ಯ ಜಲ ನಿಗಮದ ಅಡಿಯಲ್ಲಿ ಕಾಲುವೆ ನವೀಕರಣ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೪೧೦ (೫೩೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಭಾಗ್ಯ ಜಲ ನಿಗಮದ ಅಡಿಯಲ್ಲಿ ಕಾಲುವೆಗಳ ನವೀಕರಣಕ್ಕೆ ಸರಕಾರದಿಂದ ಮಂಜೂರಾದ ಹಣವೆಷ್ಟು ;

(ಆ) ಅದರಲ್ಲಿ ಬಿಡುಗಡೆಯಾದ ಹಣವೆಷ್ಟು ;

(ಇ) ಯಾವ ಯಾವ ಕಾಮಗಾರಿ, ಕಾಲುವೆಗಳ ಕಾಮಗಾರಿ ಕೈಗೆತ್ತಿಕೊಂಡಿದ್ದು ಮತ್ತು ಅದಕ್ಕೆ ವೆಚ್ಚ ಮಾಡಿದ ಹಣವೆಷ್ಟು ;

(ಈ) ಈ ಕಾಮಗಾರಿಗಳ ಗುಣಮಟ್ಟ ಕಾಪಾಡಲು ಕೈಗೊಂಡ ಕ್ರಮಗಳೇನು (ಕಾಮಗಾರಿಯ ಸಂಪೂರ್ಣ ಮಾಹಿತಿ ಒದಗಿಸುವುದು) ?

## ಹೈದ್ರಾಬಾದ್ ಕರ್ನಾಟಕ ಭಾಗದ ಜನರಿಗೆ ೩೭೧ಜೆ ಅರ್ಹತಾ ಪ್ರಮಾಣಪತ್ರ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೧೧ (೫೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದ್ರಾಬಾದ್ ಕರ್ನಾಟಕ ಭಾಗದ ಜನರಿಗೆ ೩೭೧ ಜೆ ರಡಿಯಲ್ಲಿ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ; ಸಂಬಂಧಿಸಿದ ಎಲ್ಲಾ ಜಿಲ್ಲೆಗಳಲ್ಲಿ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸುವ ಕಾರ್ಯ ಸಧ್ಯ ಪ್ರಗತಿಯಲ್ಲಿದೆಯೇ ;

(ಆ) ಸದರಿ ಪ್ರಮಾಣ ಪತ್ರಗಳು ಯಾವ ಯಾವ ಯೋಜನೆಗಳಿಗೆ ಅತ್ಯಂತ ಅವಶ್ಯಕವಾಗಿವೆ (ವಿವರಗಳನ್ನು ನೀಡುವುದು) ;

(ಇ) ಪ್ರಸಕ್ತ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ವಿತರಿಸಲಾದ ಪ್ರಮಾಣ ಪತ್ರಗಳ ಸಂಖ್ಯೆಗಳನ್ನು ನೀಡುವುದು ;

(ಈ) ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿನ ಪ್ರತಿಯೊಬ್ಬ ನಾಗರೀಕನೂ ಈ ಪ್ರಮಾಣ ಪತ್ರಗಳನ್ನು ಪಡೆಯಲೇಬೇಕಾದ ಅನಿವಾರ್ಯತೆ ಇದೆಯೇ ; ಸಿಂಧುತ್ವ ಪ್ರಮಾಣ ಪತ್ರದ ಮಾದರಿಯಲ್ಲಿ ಈ ಪ್ರಮಾಣ ಪತ್ರಗಳನ್ನು ನೀಡಲು ಸರ್ಕಾರ ಚಿಂತಿಸುವುದೇ ; (ತಿಳಿಸುವುದು) ;

(ಉ) ಅನಾವಶ್ಯಕವಾಗಿ ಪ್ರತಿಯೊಬ್ಬನೂ ಪ್ರಮಾಣ ಪತ್ರವನ್ನು ಪಡೆಯುತ್ತಿದ್ದು, ಅವಶ್ಯಕತೆ ಇರುವುದು ಮಾತ್ರ ನೇಮಕಾತಿ,

ದಾಖಲಾತಿ ಇತ್ಯಾದಿ ಪಡೆದ ಮೇಲೆ ಪ್ರಮಾಣ ಪತ್ರ ಒದಗಿಸುವಂತಹ ವ್ಯವಸ್ಥೆಯನ್ನು ಜಾರಿಗೊಳಿಸುವತ್ತ ಸರ್ಕಾರ ಚಿಂತನೆ ನಡೆಸಿದೆಯೇ ; ಇದರಿಂದ ಸಾರ್ವಜನಿಕರಿಗೆ ಅಲೆದಾಟ ಮತ್ತು ಅಧಿಕಾರಿ, ನೌಕರರಿಗೆ ಹೆಚ್ಚಿನ ಕೆಲಸದ ಒತ್ತಡ ಎರಡನ್ನೂ ತಪ್ಪಿಸಬಹುದಲ್ಲವೇ ;

(ಊ) ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿನ ಎಲ್ಲಾ ಸಹಾಯಕ ಆಯುಕ್ತರ ಕಾರ್ಯಾಲಯಗಳ ಸಿಬ್ಬಂದಿಗಳ ಹುದ್ದೆಗಳ ಮಾಹಿತಿಯನ್ನು ನೀಡುವುದು ; (ಮಂಜೂರು, ಭರ್ತಿ, ಖಾಲಿ ಹುದ್ದೆಗಳ ಮಾಹಿತಿ ನೀಡುವುದು) ?

## ಕೊಪ್ಪಳ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಗೆ ಮಂಜೂರಾದ ನಿರ್ವಹಣಾ ಮತ್ತು ದುರಸ್ಥಿ ವೆಚ್ಚ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ **ಚುನಾಯಿತರಾದವರು**) :–

೪೧೨ (೫೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯಲ್ಲಿ ೨೦೧೧–೧೨, ೧೨–೧೩, ೧೩–೧೪ನೇ ಸಾಲಿನಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ನಿರ್ವಹಣಾ ಮತ್ತು ದುರಸ್ಥಿ ವೆಚ್ಚಕ್ಕಾಗಿ ಬಿಡುಗಡೆಯಾದ ಅನುದಾನ ಎಷ್ಟು ;

(ಆ) ಸದರಿ ಅನುದಾನದಲ್ಲಿ ಬಳಕೆ ಮಾಡಲಾದ, ಬಾಕಿ ಉಳಿದ ಅನುದಾನದ ವಿವರಗಳನ್ನು ನೀಡುವುದು ;

(ಇ) ಬಳಕೆ ಮಾಡಿದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳ ಪ್ರಗತಿ ವರದಿಯನ್ನು ನೀಡುವುದು ;

(ಈ) ಬಳಕೆ ಮಾಡದೇ ಅನುದಾನ ಬಾಕಿ ಉಳಿಯಲು ಕಾರಣವೇನು ;

(ಉ) ೨೦೧೩-೧೪ನೇ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಯೋಜನೇತರ ವೆಚ್ಚಗಳ ವಿವರವಾದ ಮಾಹಿತಿಯನ್ನು ನೀಡುವುದು ?

## ಬಾಲ ಕಾರ್ಮಿಕ ಕಾರ್ಪಸ್ ನಿಧಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೪೧೩ (೫೪೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಲ ಕಾರ್ಮಿಕ ಕಾರ್ಪಸ್ ನಿಧಿಯಡಿ ಪ್ರತಿ ಜಿಲ್ಲೆಯಲ್ಲಿ ೨೦೧೩-೧೪ನೇ ಸಾಲಿನಲ್ಲಿ ಇಟ್ಟಿದ್ದ ಮತ್ತು ಉಳಿದಿದ್ದ ಹಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡಿ) ;

(ಆ) ೨೦೧೩-೧೪ನೇ ಸಾಲಿನಲ್ಲಿ ಬಳಕೆಯಾದ ಮತ್ತು ಉಳಿದ ಹಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡಿ) ;

(ಇ) ಈ ಹಣವನ್ನು ಬಳಸಲು ಇರುವ ಮಾರ್ಗಸೂಚಿಗಳೇನು ?

## ಜವಳಿ ನೀತಿ ಮತ್ತು ಅಭಿವೃದ್ಧಿ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೧೪ (೫೫೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸರ್ಕಾರವು "ಜವಳಿ ನೀತಿ"ಯನ್ನು ರೂಪಿಸಿದೆಯೇ ಇದರಲ್ಲಿರುವ ಪ್ರಮುಖ ಅಂಶಗಳನ್ನು ತಿಳಿಸುವುದು ;

(ಆ) ಜವಳಿ, ಕೈಮಗ್ಗ ಸಂಸ್ಥೆಗಳಿಗೆ ಸರ್ಕಾರ ಸಹಾಯಧನ, ಸಬ್ಸಿಡಿ ಅಥವಾ ಇನ್ನಾವುದೇ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಿದೆಯೇ ; (ವಿವರ ನೀಡುವುದು) ;

(ಇ) ರಾಜ್ಯದ ಜವಳಿ ಅಭಿವೃದ್ಧಿಗೆ ಸರ್ಕಾರದ ಸಮನ್ವಯತೆಯ ಕೊರತೆ ಇದೆ ಎಂಬುದು ನಿಜವೇ ; ಕಾರಣವೇನು ; ರಾಜ್ಯ ನೇಕಾರರಿಗೆ ಸರ್ಕಾರ ಯಾವ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಿದೆ. ಜವಳಿ ಉದ್ಯಮದ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಜವಳಿ ಉದ್ಯಮದ ಹಿತದೃಷ್ಟಿಯಿಂದ ಸರ್ಕಾರವು ರಾಜ್ಯದ ನೇಕಾರ ಸಮುದಾಯಕ್ಕೆ ನೀಡಿರುವ ಕೊಡುಗೆಗಳೇನು ; ಜವಳಿ ಅಭಿವೃದ್ಧಿಗೆ ಸರ್ಕಾರ ಅನುದಾನ ಮೀಸಲಿಟ್ಟಿದೆಯೇ ಎಷ್ಟು ಬಳಕೆಯಾಗಿದೆ. ಯಾವ ರೀತಿಯಲ್ಲಿ ಬಳಸಲಾಗಿದೆ (ವಿವರ ನೀಡುವುದು) ?

## ಕಾರ್ಮಿಕರ ಕ್ಷೇಮಾಭಿವೃದ್ಧಿ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೧೫ (೫೫೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಕಾರ್ಮಿಕರ ಹಿತದೃಷ್ಟಿಯಿಂದ ಯಾವ ನೀತಿಯನ್ನು ಜಾರಿಗೆ ತಂದಿದೆ. ಬಡ ಕಾರ್ಮಿಕರ ಮೇಲೆ ಉಳ್ಳವರ ಮಾಲೀಕರ ದೌರ್ಜನ್ಯದ ಬಗ್ಗೆ ಸರ್ಕಾರಕ್ಕೆ ಮಾಹಿತಿಯಿದೆಯೇ ; (ವಿವರಿಸುವುದು) ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಸರ್ಕಾರ ಯಾವುದಾದರೂ ನೀತಿಯನ್ನು ಜಾರಿಗೆ ತಂದಿದೆಯೇ (ವಿವರಣೆ ನೀಡುವುದು)

ತಂದಿದ್ದಲ್ಲಿ, ಈ ನೀತಿಯು ಕಾರ್ಮಿಕರಿಗೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಲಿದೆ ;

(ಇ) ರಾಜ್ಯದಲ್ಲಿ ಇರುವ ಒಟ್ಟು ಕಾರ್ಮಿಕರ ಸಂಖ್ಯೆಯೆಷ್ಟು ; ಅದರಲ್ಲಿ ಕೂಲಿ ಕಾರ್ಮಿಕರೆಷ್ಟು ; ಕಾರ್ಖಾನೆಗಳಲ್ಲಿ ಅಥವಾ ಗಾರ್ಮೆಂಟ್ಸ್, ಹೋಟೆಲ್, ಕಛೇರಿಗಳಲ್ಲಿ ದುಡಿಯುವ ರಾಜ್ಯ ಮತ್ತು ಪರ ರಾಜ್ಯದ ಕಾರ್ಮಿಕ ಸಂಖ್ಯೆಯೆಷ್ಟು, (ವಿವರ ನೀಡುವುದು); ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಭವಿಷ್ಯ ನಿಧಿಗಳನ್ನೇನಾದರೂ ಸ್ಥಾಪಿಸಿದೆಯೇ (ವಿವರ ಒದಗಿಸುವುದು) ?

## ಭಾರಿ ಮತ್ತು ಮಧ್ಯಮ ನೀರಾವರಿಯಲ್ಲಿ ಅವ್ಯವಹಾರ ಮತ್ತು ಕಳಪೆ ಕಾಮಗಾರಿ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೧೬ (೫೫೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೃಷಿ ಚಟುವಟಿಕೆ ಮತ್ತು ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ರೂಪಿಸಿದ್ದು ; ಈ ಯೋಜನೆಯಲ್ಲಿ ಹೆಚ್ಚಿನ ಯೋಜನೆಗಳು ನಿಧಾನಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಾರಣವೇನು ;

(ಆ) ಈ ಮೇಲ್ಕಂಡ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಸಮಯವೆಷ್ಟು ; ಎಷ್ಟು ಹೆಕ್ಟೇರ್ ಭೂಮಿಗೆ ಇದರ ಅನುಕೂಲ ದೊರೆಯಲಿದೆ ;

(ಇ) ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಯಲ್ಲಿ ಅವ್ಯವಹಾರ ನಡೆದಿರುವುದು, ಕಳಪೆ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಯಾರ್ಯಾರು ಶಾಮೀಲಾಗಿದ್ದಾರೆ ; ಅವ್ಯವಹಾರ ನಡೆಸಿದವರ ಮೇಲೆ ಕ್ರಮ ಜರುಗಿಸಲಾಗಿದೆಯೇ (ವಿವರ ಒದಗಿಸುವುದು) ?

## ಹೊಸ ತಾಲ್ಲೂಕುಗಳ ರಚನೆ ಮತ್ತು ಅಭಿವೃದ್ಧಿ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೧೭ (೫೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸ ತಾಲ್ಲೂಕುಗಳ ರಚನೆಯು ಪ್ರಸ್ತಾಪ ಸರ್ಕಾರದ ಮುಂದಿದೆಯೇ, ಈ ಹಿಂದಿನ ಸರ್ಕಾರ ಘೋಷಿಸಿದ ತಾಲ್ಲೂಕುಗಳ ರಚನೆಯ ಪ್ರಸ್ತಾಪದ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಆ) ಇದು ನೆನೆಗುದಿಗೆ ಬಿದ್ದಿರುವುದು ನಿಜವೇ, ಈ ಬಜೆಟ್‌ಗೂ ಪೂರ್ವದಲ್ಲಿ ಹೊಸ ತಾಲ್ಲೂಕುಗಳ ರಚನೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದೆ ;

(ಇ) ಯಾವ–ಯಾವ ಹೊಸ ತಾಲ್ಲೂಕುಗಳನ್ನು ಘೋಷಿಸಲು ಸರ್ಕಾರ ಉದ್ದೇಶಿಸಿದೆ. ಈ ಪೈಕಿ ಹಿಂದಿನ ಸರ್ಕಾರದ ಘೋಷಿತ ತಾಲ್ಲೂಕುಗಳು ಒಳಗೊಂಡಿದೆಯೇ ;

(ಈ) ಅವುಗಳಲ್ಲದೆ ಬೇರೆ ಯಾವ ಸ್ಥಳಗಳನ್ನು ಇದಕ್ಕಾಗಿ ಗುರುತಿಸಲಾಗಿದೆ ; (ವಿವರ ಒದಗಿಸುವುದು) ;

(ಉ) ಹೊಸ ತಾಲ್ಲೂಕು ರಚನೆಗಾಗಿ ನೇಮಿಸಿದ್ದ ೪ ಸಮಿತಿಗಳ ವರದಿಯಲ್ಲಿ ಪ್ರಸ್ತಾಪಿಸಿರುವ ಆಗಿನ ಹಾಗೂ ಈಗಿನ ಸರ್ಕಾರದ ಹೊಸ ತಾಲ್ಲೂಕುಗಳು ಯಾವುವು ; ಇದನ್ನು ಯಾವಾಗ ಘೋಷಣೆ ಮಾಡಲಾಗುವುದು (ವಿವರ ನೀಡುವುದು) ?

**ವಸತಿ ಸಮುಚ್ಚಯಗಳಿಗೆ ಸರ್ಕಾರದ ಮಾನದಂಡ.**

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೧೮ (೫೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಖಾಸಗಿ ನಿರ್ಮಾಣ ಸಂಸ್ಥೆಗಳು ಒಟ್ಟು ಎಷ್ಟು ವಸತಿ ಸಮುಚ್ಚಯಗಳನ್ನು ನಿರ್ಮಿಸಿದೆ ;

(ಆ) ಈ ವಸತಿ ಸಮುಚ್ಚಯಗಳಿಗೆ ಸರ್ಕಾರದಿಂದ (ಇಲಾಖೆಯಿಂದ) ಅನುಮತಿ ಪಡೆಯಲಾಗಿದೆಯೇ ; ಹಾಗಿದ್ದಲ್ಲಿ ಎಷ್ಟು ; ಅನುಮತಿ ಪಡೆಯದೇ ನಿರ್ಮಾಣಗೊಂಡ ವಸತಿ ಸಮುಚ್ಚಯಗಳೆಷ್ಟು ; ಇವುಗಳಿಗೆ ಕ್ರಮ ಜರುಗಿಸಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು) ;

(ಇ) ವಸತಿ ಸಮುಚ್ಚಯಗಳಿಗೆ ಪರಿಸರ ಇಲಾಖೆಯಿಂದ ಅನುಮತಿ ನೀಡುವಾಗ ವಿಧಿಸುವ ಮಾನದಂಡಗಳೇನು ಹಾಗೂ ಇದುವರೆಗೆ ಎಷ್ಟು ಸಂಸ್ಥೆಗಳು ಮಾನದಂಡವನ್ನು ಅನುಸರಿಸದೇ ಸಮುಚ್ಚಯಗಳ ನಿರ್ಮಾಣ ಮಾಡಿದೆ ; ಅವುಗಳಿಗೆ ಸರ್ಕಾರ ತೆಗೆದುಕೊಂಡ ನಿರ್ಧಾರಗಳೇನು (ಕಳೆದ ೩ ವರ್ಷಗಳಿಂದ ನಿರ್ಮಾಣವಾದ, ನಿರ್ಮಾಣ ಹಂತದಲ್ಲಿರುವ ಸಮುಚ್ಚಯಗಳ ವಿವರ ನೀಡುವುದು) ?

## ಅಮೃತ ಭೂಮಿ ಯೋಜನೆ.

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೧೯ (೫೫೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಅಮೃತ ಭೂಮಿ ಯೋಜನೆಗೆ ೨೦೧೩-೧೪ರಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ;

(ಆ) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಕರ್ನಾಟಕ ಅಮೃತ ಭೂಮಿ ಯೋಜನೆ ಜಾರಿಗೆ ತರಲಾಗಿದೆ ;

(ಇ) ಪ್ರತಿ ತಾಲ್ಲೂಕಿಗೆ ನಿಗದಿ ಮಾಡಿರುವ ಮೊತ್ತವೆಷ್ಟು ;

(ಈ) ಪ್ರತಿ ರೈತರ ಕುಟುಂಬಕ್ಕೆ ನಿಗದಿ ಮಾಡಿರುವ ಹಣವೆಷ್ಟು ;

(ಉ) ಫಲಾನುಭವಿಯಾಗುವ ರೈತರ ಕುಟುಂಬಕ್ಕೆ ಇರುವ ಮಾನದಂಡವೇನು ;

(ಊ) ಕರ್ನಾಟಕ ಅಮೃತ ಭೂಮಿ ಯೋಜನೆ ಬಗ್ಗೆ ರೈತರಿಗೆ ಜಾಗೃತಿ ತಿಳುವಳಿಕೆ ನೀಡಲು ಹಾಕಿರುವ ಕಾರ್ಯಕ್ರಮಗಳೇನು ?

## ಕೊಂಡುಕುರಿ ವನ್ಯಧಾಮಕ್ಕೆ ಬೆಂಕಿ

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೨೦ (೫೫೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜಗಳೂರು ತಾಲ್ಲೂಕಿನ ಕೊಂಡುಕುರಿ ವನ್ಯಧಾಮದಲ್ಲಿ ಬೆಂಕಿ ಬಿದ್ದು, ಬೆಂಕಿ ಹಾವಳಿಯಿಂದ ಅದೇ ಸಮಯದಲ್ಲಿ ಅಕ್ರಮವಾಗಿ ಒಳನುಗ್ಗಿದ ಬೇಟೆಗಾರರ ಹಾವಳಿಯಿಂದ ಕಾಡು ಪ್ರಾಣಿಗಳು ಗ್ರಾಮಕ್ಕೆ ನುಗ್ಗಿ ಜನರಿಗೆ ಅಪಘಾತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ; ಬಂದಿದ್ದರೆ, ತೆಗೆದುಕೊಂಡಿರುವ ಕ್ರಮವೇನು ;

(ಆ) ಅದೇ ಸಮಯದಲ್ಲಿ ಬೇಟೆಗಾರರಿಗೂ ಹಾಗೂ ಅರಣ್ಯ ಇಲಖೆಯ ಸಿಬ್ಬಂದಿಗಳಿಗೂ ಗಲಾಟೆಯಾಗಿ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ; ಹಾಗಿದ್ದರೆ, ತೆಗೆದುಕೊಂಡಿರುವ ಕ್ರಮವೇನು ;

(ಇ) ಗಲಾಟೆ ಆದ ನಂತರ ಕಾಡಿಗೆ ಬೆಂಕಿ ಬಿದ್ದಿದೆ, ಆದರೆ ಗಲಾಟೆಯಿಂದ ಅರಣ್ಯ ಇಲಾಖೆಯ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ಉತ್ಸಾಹ ತೋರಿಲ್ಲ. ಇದರ ಹಿಂದಿರುವ ಉದ್ದೇಶವೇನು ; ಇದರ ಬಗ್ಗೆ ತನಿಖೆ ಮಾಡಲಾಗಿದೆಯೇ ; (ವಿವರ ತಿಳಿಸುವುದು) ;

(ಈ) ಬೆಂಕಿಯಿಂದ ಸದರಿ ವನ್ಯಧಾಮಕ್ಕೆ (ಕೊಂಡುಕುರಿ, ಆಗಿರುವ ನಷ್ಟವೆಷ್ಟು ;

(ಉ) ಶ್ರೀಗಂಧ ಮರದ ತುಂಡಗಳನ್ನು ಪತ್ತೆ ಮಾಡಲು ಪ್ರತ್ಯೇಕ ವಲಯ ಅರಣ್ಯಾಧಿಕಾರಿಗಳನ್ನು ನೇಮಿಸುವಂತೆ ಹೈಕೋರ್ಟ್ ಆದೇಶಿಸಿತ್ತು. ಅಂತೆಯೇ ವಲಯ ಅರಣ್ಯಾಧಿಕಾರಿಗಳನ್ನು ನೇಮಿಸಲಾಗಿದೆಯೇ ; ನೇಮಿಸಿದ್ದರೆ, ಎಷ್ಟು ವಲಯ ಅರಣ್ಯಾಧಿಕಾರಿಗಳನ್ನು ನೇಮಿಸಲಾಗಿದೆ ; ನೇಮಿಸದಿದ್ದರೆ ಕಾರಣವೇನು ?

## ಮುಂಡಗೋಡು ತಾಲ್ಲೂಕಿನ ಟಿಬೆಟಿಯನ್ನರು

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೨೧ (೫೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮುಂಡಗೋಡು ತಾಲ್ಲೂಕಿನ ಟಿಬೆಟಿಯನ್ನರ ಕಾಲೋನಿಗೆ ಸರ್ಕಾರದಿಂದ ಎಷ್ಟು ಎಕರೆ ಜಾಗ ನೀಡಲಾಗಿದೆ ; ಜಾಗವನ್ನು ಯಾವ ಆಧಾರದಲ್ಲಿ ನೀಡಲಾಗಿದೆ ; ಗುತ್ತಿಗೆ ಆಧಾರದಲ್ಲಿಯೇ ; ಅಥವಾ ಸ್ವಂತಕ್ಕೊ ; ಅಥವಾ ಬಾಡಿಗೆಗೆ ಅಥವಾ ಖರೀದಿಗೆ ನೀಡಲಾಗಿದೆಯೇ ; (ವಿವರ ನೀಡುವುದು) ;

(ಆ) ಟಿಬೆಟಿಯನ್ನರು ಸದರಿ ಜಾಗದಲ್ಲಿ ನಿರ್ಮಾಣ ಮಾಡಿರುವ ಕಟ್ಟಡಗಳಿಗೆ ಅನುಮತಿ ಪಡೆಯಲಾಗಿದೆಯೇ ;

(ಇ) ಕಟ್ಟಡಗಳಿಗೆ ಕಂದಾಯ ಸಂದಾಯ ಮಾಡುತ್ತಿರುತ್ತಾರೆಯೇ ;

(ಈ) ಟಿಬೆಟಿಯನ್ನರಿಗೆ ಜಾಗ ನೀಡಿರುವುದು ನಿರಾಶ್ರಿತರ ಆಧಾರದಲ್ಲಿ ಎಂಬ ನಿಯಮದಲ್ಲಿ ನೀಡಿದ್ದರೆ, ಐಷಾರಾಮಿ ಕಟ್ಟಡಗಳು ತಲೆ ಎತ್ತಿರುವುದು ಸರ್ಕಾರ ಅಥವಾ ಅಲ್ಲಿನ ತಹಸೀಲ್ದಾರ್/ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿಲ್ಲವೇ ;

(ಉ) ಬ್ಯಾಂಕ್, ವಸತಿಗೃಹ, ಆಸ್ಪತ್ರೆ, ಶಾಲೆ ಈಗ ಕಟ್ಟಡಗಳು ತಲೆ ಎತ್ತಿವೆ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

(ಊ) ರಾಜ್ಯದಲ್ಲಿ ಅಕ್ರಮ-ಸಕ್ರಮ ಮಾಡಲು ಹೊರಟಿರುವ ಸರ್ಕಾರವು ಬೆಂಗಳೂರು ಮಹಾನಗರ ಹೊರತುಪಡಿಸಿ ಪಂಚಾಯ್ತಿ ವ್ಯಾಪ್ತಿ ಹಾಗೂ ಗ್ರಾಮಠಾಣ ವ್ಯಾಪ್ತಿಯಲ್ಲಿ ಬರುವ ಖಾಸಗಿ ಬಡಾವಣೆಯ ಪರಿವರ್ತನೆಯಾಗದ ನಿವೇಶನಗಳಿಗೆ ವಿಧಿಸಿರುವ ಅಭಿವೃದ್ಧಿ ಶುಲ್ಕವೆಷ್ಟು ; (ವಿವರ ತಿಳಿಸುವುದು) ;

(ಋ) ಬೆಂಗಳೂರಿನ ಜಕ್ಕರಾಯನ ಕೆರೆಯ ವಿಸ್ತೀರ್ಣ ಎಷ್ಟು ; (ಚಕ್ ಬಂದಿ ಸಹಿತ ವಿವರ ನೀಡುವುದು) ;

(ಎ) ಜಕ್ಕರಾಯನ ಕೆರೆ ಒತ್ತುವರಿಯಾಗಿರುವುದೇ ಆಗಿದ್ದರೆ, ಒತ್ತುವರಿ ಮಾಡಿರುವುದರ ಮೇಲೆ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮವೇನು ;

(ಏ) ಜಕ್ಕರಾಯನ ಕೆರೆ ಜಾಗದಲ್ಲಿ ಮೆಟ್ರೋಗಾಗಿ ಟ್ರಾಕ್ ಹಾಗೂ ನಿಲ್ದಾಣ ನಿರ್ಮಾಣ ಮಾಡಲು ಜಾಗ ನೀಡಲಾಗಿದೆಯೇ ; ನೀಡಿದ್ದರೆ ಎಷ್ಟು ಜಾಗ ನೀಡಲಾಗಿದೆ ; ನೀಡಿದ್ದರೆ, ಕೆರೆಯ ಯಾವ ಯಾವ ಭಾಗದಲ್ಲಿ ನೀಡಲಾಗಿದೆ ; (ಚಕ್ ಬಂದಿಯೊಂದಿಗೆ ವಿವರ ನೀಡುವುದು) ?

## ಜಮೀನು ಸರ್ವೆ ಕಾರ್ಯ ವಿಳಂಬ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) :-**

೪೨೨ (೫೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತತ್ಕಾಲ್ ಪೋಡಿ ಮೂಲಕ ಗಡಿ ಗುರುತಿಸಲು ಸರ್ವೆಕಾರ್ಯಕ್ಕೆ ಇದುವರೆವಿಗೂ ಎಷ್ಟು ಮಂದಿ ಜಮೀನುದಾರರು ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿರುತ್ತಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಜಮೀನಿನ ಗಡಿ ಗುರುತಿಸಲು ಸರ್ವೆ ಕಾರ್ಯಕ್ಕೆ ಎಷ್ಟು ಮಂದಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿರುತ್ತಾರೆ ;

(ಇ) ಇದುವರೆವಿಗೂ ಎಷ್ಟು ಮಂದಿ ಜಮೀನುದಾರರು ಲೆವೆನ್ ಈ ಸ್ಕೆಚ್‌ಗೆ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿರುತ್ತಾರೆ ;

(ಈ) ಸದರಿ ಅರ್ಜಿಗಳು ಯಾವ ಕಾಲದಿಂದ ಬಾಕಿ ಉಳಿದಿವೆ ; (ಪ್ರತ್ಯೇಕ ವಿವರ ನೀಡುವುದು) ;

(ಉ) ಸದರಿ ಅರ್ಜಿಗಳ ಸರ್ವೆ ಕಾರ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರ ರೂಪಿಸಿರುವ ನಿಯಮಗಳೇನು ; (ಪ್ರತ್ಯೇಕ ವಿವರ ನೀಡುವುದು) ;

(ಊ) ಸರ್ವೆಕಾರ್ಯ ವಿಳಂಬದಿಂದ ಜಮೀನುದಾರರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಸರ್ವೆ ಕಾರ್ಯಗಳಲ್ಲಿ ವಿಳಂಬ ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ (ವಿವರ ನೀಡುವುದು) ?

## ಅರಣ್ಯ ಗಣಿಗಾರಿಕೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೨೩ (೫೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕು ನೆಲ್ಲಿಬೀಡು ಗ್ರಾಮದ ರಿ.ಸ. ನಂ.೧೦೬/ಎ೧ ಕ್ಷೇತ್ರ ೭೩.೨೦ ಎಕರೆ ಸಾಮಾಜಿಕ ಅರಣ್ಯ ನೆಡುತೋಪು ಮಾಡಲು ಮತ್ತು ರಿ.ಸ. ನಂ ೧೦೬/ಎ೨ ಕ್ಷೇತ್ರ ೬೫ ಎಕರೆ ಕಾಯ್ದಿರಿಸಿದ ಅರಣ್ಯಕ್ಕೆ ಸೇರಿದ್ದು, ಇದನ್ನು ಕಂದಾಯ ಇಲಾಖೆಯವರು ಗಣಿಗಾರಿಕೆ ಮಾಡಲು ಎಷ್ಟು ಎಕರೆ ಜಾಗವನ್ನು ಲೀಸ್ ಪ್ರಕಾರ ಕೊಟ್ಟಿರುತ್ತಾರೆ ; ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಕಂದಾಯ ಇಲಾಖೆಯವರು ನಿಯಮ ಬಾಹಿರ ಕೆಲಸವೇನಾದರೂ ಮಾಡಿದ್ದಾರೆಯೇ ;

(ಇ) ಲೀಜ್ ಮಾಡಿಕೊಟ್ಟ ಜಮೀನಿಗಿಂತ ಹೆಚ್ಚಿನ ಜಮೀನಿನಲ್ಲಿ ಗುತ್ತಿಗೆದಾರರು ಅತಿಕ್ರಮಣ ಮಾಡಿದ್ದಾರೆಯೇ; ಮಾಡಿದ್ದಲ್ಲಿ, ನಿಯಮ ಉಲ್ಲಂಘನೆಯ ಮೇಲೆ ಜರುಗಿಸಿದ ಕ್ರಮವೇನು ?

## ಅರಣ್ಯ ಗಣಿಗಾರಿಕೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೨೪ (೫೩೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕು ನೆಲ್ಲಿಬೀಡು ಗ್ರಾಮದ ರಿ. ಸ. ನಂ.೧೦೬/ಎ೧ ಕ್ಷೇತ್ರ ೭೩.೨೦ ಎಕರೆ ಸಾಮಾಜಿಕ

ಅರಣ್ಯ ನೆಡುತೋಪು ಮಾಡಲು ಮತ್ತು ರಿ.ಸ.ನಂ.೧೦೬/ಎ೨ ಕ್ಷೇತ್ರ ೬೫ ಎಕರೆ ಕಾಯ್ದಿರಿಸಿದ ಅರಣ್ಯಕ್ಕೆ ಸೇರಿದ್ದು, ಅರಣ್ಯ ಇಲಾಖೆಯವರು ಗಣಿಗಾರಿಕೆ ಮಾಡಲು ಎಷ್ಟು ಎಕರೆ ಜಾಗವನ್ನು ಲೀಸ್ ಪ್ರಕಾರ ಕೊಟ್ಟಿರುತ್ತಾರೆ ; ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರು ಸೇರಿಕೊಂಡು ನಿಯಮ ಬಾಹಿರ ಕೆಲಸವೇನಾದರೂ ಮಾಡಿದ್ದಾರೆಯೇ ;

(ಇ) ಲೀಜ್ ಮಾಡಿಕೊಟ್ಟ ಜಮೀನಿಗಿಂತ ಹೆಚ್ಚಿನ ಜಮೀನಿನಲ್ಲಿ ಗುತ್ತಿಗೆದಾರರು ಅತಿಕ್ರಮಣ ಮಾಡಿದ್ದಾರೆಯೇ; ಮಾಡಿದ್ದಲ್ಲಿ, ನಿಯಮ ಉಲ್ಲಂಘನೆಯ ಮೇಲೆ ಜರುಗಿಸಿದ ಕ್ರಮವೇನು ?

## ಭದ್ರಾನಾಲಾ ಮೇಲ್ದಂಡೆ ಯೋಜನೆ ಸ್ಥಿತಿ-ಗತಿ

**ಶ್ರೀ. ಜಿ. ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೪೨೫ (೫೨೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಭದ್ರಾನಾಲಾ ಮೇಲ್ದಂಡೆ ಯೋಜನೆ ಕಾಮಗಾರಿಗಳಿಗೆ ವೇಗ ನೀಡಲು ಇಲಾಖೆ ಕ್ರಮವಹಿಸಿದೆಯೇ ; (ವಿವರ ಒದಗಿಸುವುದು) ;

(ಆ) ಯೋಜನೆ ಪೂರ್ಣಗೊಳಿಸಲು ಇಲಾಖೆ ಕಾಲಮಿತಿ ಹಾಕಿದೆಯೇ (ಮಾಹಿತಿ ನೀಡುವುದು) ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03366/1000 ಪ್ರತಿಗಳು/30-06-2014